UNIVERSAL LIBRARY
OU_198996
UNIVERSAL LIBRARY

# ವೀರ ಪ್ರತಾಪ


ಲೇಖಕರು

ದಿ. ವೆ. ತಿ. ಕುಲಕರಣಿ ಗಳಗನಾಥರು


[ ಬೆಲೆ ೦—೬—೦ ]


ಪ್ರಕಾಶಕರು

ಗಳಗನಾಥ ಸುರಸ ಗ್ರಂಥಮಾಲಾ

ಧಾರವಾಡ.

# ಪ್ರಥಮ ಮುದ್ರಣಕ್ಕೆ ಮುನ್ನುಡಿ

ವೀರ ಕ್ಷತ್ರಿಯ ಕುಲತಿಲಕನೂ ಸ್ವಾಭಿಮಾನಿಯೂ ಆದ ವೀರ ಪ್ರತಾಪನು ತನ್ನ ವೀರ ಪ್ರತಿಜ್ಞೆಯಂತೆ, ಮೊಗಲ ಸಾಮ್ರಾಟ ಸೇಲಿಮನು ತನ್ನ ದುಷ್ಟ ಕಾಮವಾಸನೆಯನ್ನು ಶಾಂತಗೊಳಿಸುವದಕ್ಕಾಗಿ ಸೆರೆಹಿಡಿದೊಯ್ದು ತನ್ನಹತ್ತಿರವೇ ಆನೆಯ ಮೇಲಿನ ಅಂಬಾರಿಯಲ್ಲಿ ಕುಳ್ಳಿರಿಸಿಕೊಂಡಿದ್ದ ವಿಮಲೆಯನ್ನು ಬಿಡುಗಡೆ ಮಾಡಿ, ಅದೇ ಪ್ರಯತ್ನದಲ್ಲಿದ್ದ ರಜಪೂತರ ಮನಕ್ಕಾನಂದವನ್ನಿತ್ತ ಚಿಕ್ಕ ಕಥೆಯು ಈ ಚಿಕ್ಕ ಪುಸ್ತಕದಲ್ಲಿ ಇದೆ. ದಿವಂಗತ ಶ್ರೀ ಗಳಗನಾಥರವರು ತಮ್ಮ ಗಳಗನಾಥ ಸುರಸ ಗ್ರಂಥಮಾಲೆಗಾಗಿ ಬರೆದ ಈ ಕಥೆಯು ಚಿಕ್ಕದಿದ್ದರೇನಾಯಿತು! ಚಿಕ್ಕ ಅಂಕುಶವು ಬಹು ಬಲಾಢ್ಯ ಮದ್ದಾನೆಯ ಸೊಕ್ಕನ್ನು ಇಳಿಸುವಂತೆ ಈ ಚಿಕ್ಕ ಕಥೆಯಾದರೂ ರಣಹೇಡಿಯಲ್ಲಿಯ ಅಧೈರ್ಯವನ್ನು ಅಳಿದು, ಅವನಲ್ಲಿ ಕೂಡ ಶೌರ್ಯದುಕ್ಕನ್ನು ಉಕ್ಕೇರಿಸುವದಕ್ಕೆ ತಕ್ಕದ್ದಾಗಿರುವದೆಂಬುವದರಲ್ಲಿ ಎಳ್ಳಷ್ಟು ಕೂಡ ಸಂಶಯವಿಲ್ಲವು. ನನ್ನ ಪರಮಪೂಜ್ಯ ಗುರುವರ್ಯ ಗಳಗನಾಥರವರ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುವಷ್ಟು ಯೋಗ್ಯತೆಯು ನನ್ನಲ್ಲಿ ಇಲ್ಲವೇ ಇಲ್ಲ. ಬರಹವು ಎಷ್ಟು ಸುರಸವಾಗಿದೆ ಎಂಬುದನ್ನು ಆರಸ ಸವಿಸವಿದು ಆನಂದ ಹೊಂದಬೇಕೆಂದು ರಸಿಕರಲ್ಲಿ ನನ್ನ ಸವಿನಯ ಬೇಡಿಕೆಯು ಇದೆ.

ಧಾರವಾಡ
೨೦—೨—೪೯

**ಅಚ್ಯುತ ಕೃಷ್ಣರಾವ ಹೂಯಿಲಗೋಳ**
**ಗದಗ**

---

ಧಾರವಾಡ ಗಳಗನಾಥ ಮುದ್ರಣಾಲಯದಲ್ಲಿ ಎಸ್. ಎಮ್. ಜೋಶಿ ಇವರಿಂದ ಮುದ್ರಿಸಲ್ಪಟ್ಟು, ಗಳಗನಾಥ ಸುರಸ ಗ್ರಂಥಮಾಲೆಯಲ್ಲಿ ಪ್ರಸಿದ್ಧ ಮಾಡಲ್ಪಟ್ಟಿತು. ( ದ್ವಿತೀಯ ಮುದ್ರಣ ೧೯೬೦ ).

# ವೀರ ಪ್ರತಾಪ

ಅಥವಾ

# ಸ್ವಾಭಿಮಾನ-ಸಂಭ್ರಮ

೧ನೆಯ ಪ್ರಕರಣ

## ಅಪರಿಚಿತ ಸವಾರರು

ಮುಂಜಾವಿನ ತಂಗಾಳಿಯು ಮಂದವಾಗಿ ಬೀಸುತ್ತಿತ್ತು. ಬಾಲ ಸೂರ್ಯನ ಕೋಮಲ ಕಿರಣಗಳು ಎಲ್ಲ ಕಡೆಯಲ್ಲಿ ಪಸರಿಸುತ್ತಲಿದ್ದವು. ಅರವಲೀ ಪರ್ವತದೊಳಗಿನ ಗಗನಚುಂಬಿತ ವೃಕ್ಷಗಳು ಈ ಹೊಂಬಣ್ಣದ ಕಿರಣಗಳಿಂದ ಶೋಭಿಸುತ್ತಲಿದ್ದವು. ನಿಬಿಡವಾದ ವೃಕ್ಷಸಮೂಹದೊಳಗಿಂದ ಜುಳು ಜುಳು ಹರಿಯುವ ಜಲಪ್ರವಾಹಗಳ ಸುನಾದವು ಎಡೆಬಿಡದೆ ಇಂಪಾಗಿ ಕೇಳಬರುತ್ತಿತ್ತು. ಕ್ರೂರ ಶ್ವಾಪದಗಳು ತಮ್ಮ ತಮ್ಮ ಗವಿ ಸೇರಿದ್ದರಿಂದ, ಒಂದು ಬಗೆಯ ಶಾಂತತೆಯ ಸಾಮ್ರಾಜ್ಯವು ಪ್ರಸ್ಥಾಪಿತವಾಗಿತ್ತು; ಆದರೆ ಪಕ್ಷಿಗಣವು ತಮ್ಮ ಮಂಜುಳ ಧ್ವನಿಯಿಂದ ಆ ಶಾಂತತೆಗೆ ಭಂಗತರತೊಡಗಿದ್ದರೂ, ಆ ಶಾಂತತಾಭಂಗದಿಂದ ತಾಪವಾಗದೆ, ಮನೋರಂಜನವಾಗತೊಡಗಿತ್ತು.

ಇಂಥ ಉಲ್ಲಾಸದ ಮುಂಜಾವಿನ ಸಮಯದಲ್ಲಿ ಅರವಲೀಪರ್ವತದ ಕಂದರದೊಳಗಿಂದ ಇಬ್ಬರು ರಾವುತರು ಮೊಗಲ ಬಾದಶಹನಾದ ಸಲೀಮನ ಛಾವಣಿಯ ಕಡೆಗೆ ಬಹು ವೇಗದಿಂದ ಸಾಗಿದ್ದರು. ಅವರ ಉಡಿಗೆ-ತೊಡಿಗೆಗಳು ದೂಳಿಯಿಂದ ಮುಸುಕಿದ್ದವು. ಅವರ ಕುದುರೆಗಳೂ, ಅವರೂ ಬೆವತು ಶಗಣಿಯಾಗಿದ್ದರು. ಕುದುರೆಗಳ ಬಾಯೊಳಗಿಂದ ಬುರುಗು ಸುರಿಯುತ್ತಿತ್ತು; ಆದರೂ ಆ ರಾವುತರಿಗೆ ಕುದುರೆಗಳ ಪರಿವೆಯಿದ್ದಿಲ್ಲ. ಅವು ಬೇಗನೆ ಸಾಗಬೇಕೆಂದು ಅವನ್ನು ಚಪ್ಪರಿಸಿ ಉತ್ಸಾಹಗೊಳಿಸುತ್ತಿದ್ದರು. ಆ ಜಾತಿವಂತ ಕುದುರೆಗಳಾದರೂ ತಮ್ಮ ಶ್ರಮವನ್ನು ಲೆಕ್ಕಿಸದೆ ತಮ್ಮ ಒಡೆಯರ ಸಂಭಾವನೆಯಿಂದ ಉತ್ಸಾಹಗೊಂಡು ಒತ್ತರದಿಂದ ಸಾಗಿದ್ದವು. ಆ ರಾವು

ತರು ಒಬ್ಬರ ಕೂಡೊಬ್ಬರು ಮಾತಾಡುತ್ತಿದ್ದಿಲ್ಲ ಅತಿ ವೇಗದಿಂದ ಮಾರ್ಗ ಕ್ರಮಿಸಿ ಹೋಗುವುದು ಅವರ ಮುಖ್ಯ ಕೆಲಸವಾಗಿತ್ತು.

ಆ ರಾವುತರಲ್ಲಿ ಒಬ್ಬನ ವಯಸ್ಸು ಸರಾಸರಿ ಇಪ್ಪತ್ತೈದು ವರ್ಷದ್ದಾಗಿರಬಹುದು. ಅವನ ಎಡಗಡೆಗೆ ನಡುವಿನಲ್ಲಿ ಒಂದು ಖಡ್ಗವು ಅಲೆದಾಡುತ್ತಿತ್ತು. ರತ್ನಖಚಿತವಾದ ಹಿಡಿಕೆಯುಳ್ಳದ್ದೊಂದು ಕಠಾರಿಯನ್ನು ಅವನು ನಡುವಿನಲ್ಲಿರಿಸಿದ್ದನು; ಇನ್ನೊಬ್ಬ ರಾವುತನು ತೀರ ಚಿಕ್ಕವನಿದ್ದನು. ಅವನು ಹದಿನೈದು ಹದಿನಾರು ವರ್ಷದವನಿರಬಹುದು. ಅವನ ಮುಖಲಕ್ಷಣವು ಅವನ ವಯಸ್ಸಿಗನುರೂಪವಾದ ಸರಲತ್ವವನ್ನೂ, ವಿಶೇಷವಾಗಿ ಮಾರ್ದವವನ್ನೂ ವ್ಯಕ್ತಪಡಿಸುತ್ತಿತ್ತು. ಸ್ವಭಾವತಃ ನಗೆಮೊಗದವನಾಗಿದ್ದ ಆ ಬಾಲಸವಾರನನ್ನು ಈಗ ಚಿಂತೆಯು ಆವರಿಸಿದ್ದರಿಂದ ಒಂದು ಪ್ರಕಾರದ ಶೋಭೆಯುಂಟಾದಂತಾಗಿತ್ತು. ಅವನು ಗುಲಾಬಿಬಣ್ಣದ ರೇಶಿಮೆಯ ಮುಂಡಾಸವನ್ನು ಸುತ್ತಿದ್ದನು. ಒಂದು ಹದನಾದ ಕತ್ತಿಯ ಹೊರತು ಅವನಲ್ಲಿ ಬೇರೆ ಯಾವ ಆಯುಧಗಳೂ ಇದ್ದಿಲ್ಲ. ಅವನು ಮೇಲೆ ಮೇಲೆ ನಿಟ್ಟುಸಿರುಬಿಟ್ಟು ತನ್ನ ದುಃಖವೇಗವನ್ನು ಕಡಿಮೆಮಾಡಿಕೊಳ್ಳುತ್ತಿದ್ದನು; ಆದರೂ ಒಂದೆರಡು ಅಶ್ರುಬಿಂದುಗಳು ಅವನ ಕಣ್ಣೊಳಗಿಂದ ಉದುರದೆ ಇರಲಿಲ್ಲ. ಅವು ತನ್ನ ಸಂಗಡಿಗನ ಕಣ್ಣಿಗೆ ಬೀಳಬಾರದೆಂದು ಅವನ್ನು ಕೂಡಲೆ ಅವನು ಒರಿಸಿಬಿಟ್ಟನು.

ಹೀಗೆ ಆ ರಾವುತರು ಅರವಲೀಪರ್ವತದ ಕಂದರವನ್ನು ಕ್ರಮಿಸಿ ಅದರ ತಪ್ಪಲಲ್ಲಿ ತ್ವರೆಯಿಂದ ಮಾರ್ಗವನ್ನು ಕ್ರಮಿಸುತ್ತಿರಲು, ತಮ್ಮ ಕಡೆಗೆ ಓಡಿ ಬರುತ್ತಿರುವ ಕುದುರೆಯ ಖುರಗಳ ಧ್ವನಿಯು ಅವರ ಕಿವಿಗೆ ಕೇಳಿಸತೊಡಗಿತು. ತುಸು ಹೊತ್ತಿನ ಮೇಲೆ "ಎಲೇ ನೀಚರೇ, ಕೃತಘ್ನರೇ, ನಿಲ್ಲಿರಿ ನಿಲ್ಲಿರಿ" ಎಂದು ಸಿಟ್ಟಿನಿಂದ ಆರ್ಭಟಿಸುವ ಒಬ್ಬ ರಜಪೂತ ರಾವುತನು ಅವರ ಎದುರಿಗೆ ಬಂದು ನಿಂತನು. ಅವನ ಒರೆಹಿರಿದ ಖಡ್ಗವು ಸೂರ್ಯಪ್ರಕಾಶದಲ್ಲಿ ಪ್ರಳಯಕಾಲದ ಯಮುನ ನಾಲಿಗೆಯಂತೆ ಅಲೆದಾಡುತ್ತಲಿತ್ತು. ಅವನ ಜಾತಿವಂತ ಕುದುರೆಯನ್ನೂ, ಅವನ ಮುಖದಲ್ಲಿ ಉಕ್ಕುತ್ತಿರುವ ಪ್ರತಾಪವನ್ನೂ ನೋಡಿದ ವೀರರು ತಟಸ್ಥರಾಗುತ್ತಲಿದ್ದರು. ಇಡಿಯ ರಜಪೂತಸ್ಥಾನದಲ್ಲಿ ಅವನ ಈ ಜಾತಿವಂತ ಕುದುರೆಯನ್ನು ಹೋಲುವ ಕುದುರೆಯೂ, ಆ ಜಾತಿವಂತ ವೀರನನ್ನು ಹೋಲುವ ವೀರರೂ ದುರ್ಲಭರಾಗಿದ್ದರು.

ಇಂಥ ಪ್ರತಾಪಶಾಲಿಯಾದ ರಾವುತನನ್ನು ನೋಡಿ ನಮ್ಮ ಮಾರ್ಗಸ್ಥರಾದ ಇಬ್ಬರು ರಾವುತರು ಚಕಿತರಾದರು ತಮ್ಮ ಯಾವ ಸಂಬಂಧವೂ ಇಲ್ಲದೆ, ತಮ್ಮ ಗುರುತು-ಪರಿಚಯುವಿಲ್ಲದೆ ಒಮ್ಮೆಲೆ ತಮಗೆ— " ನೀಚರೇ, ಕೃತಘ್ನರೇ " ಎಂದು ಸಂಬೋಧಿಸಲಿಕ್ಕೆ ಕಾರಣವೇನೆಂದು ಅವರಿಗೆ ತಿಳಿಯದಾಯಿತು ; ಆದರೆ ಶಸ್ತ್ರಪಾಣಿಯಾದ ವೈರಿಯು ಎದುರಿಗೆ ನಿಂತಿರಲು, ಆ ತರುಣ ರಜಪೂತ ವೀರರಿಬ್ಬರು ಸುಮ್ಮನೆ ಹೇಗೆ ನಿಲ್ಲುವರು ? ಕಾದುವದನ್ನು ಬಿಟ್ಟು ಕಾಳು ರಗಳೆಯ ವಿಚಾರಿಸುವ ಉಸಾಬರಿಗೆ ಅವರು ಯಾಕೆ ಹೋಗುವರು ? ಅವರು ಕೂಡಲೆ ತಮ್ಮ ಖಡ್ಗಗಳನ್ನು ಹಿರಿದು ಯುದ್ಧಕ್ಕೆ ಸನ್ನದ್ಧರಾದರು; ಆದರೂ ಖಡ್ಗವೆತ್ತುತ್ತ ಇಪ್ಪತ್ತೈದು ವರ್ಷದ ರಾವುತನು ಆ ಪ್ರತಾಪಿಯಾದ ಹೊಸ ರಾವುತನಿಗೆ— " ನಮ್ಮಿಂದಾದ ಅಪರಾಧವೇನು ? " ಎಂದು ಪ್ರಶ್ನೆ ಮಾಡಲು, ಅದಕ್ಕೆ ಆ ಪ್ರತಾಪವಂತ ರಾವುತನು ಕಠೋರಸ್ವರದಿಂದ— " ಈಗ ನೀವು ಎತ್ತ ನಡೆದಿರುವಿರಿ ? ಮೊಗಲರ ಛಾವಣಿಯ ಕಡೆಗಲ್ಲವೆ ? " ಎಂದು ಪ್ರಶ್ನೆ ಮಾಡಲು, " ಹೌದು, ಆದರೆ " ಎಂದು ಆ ತರುಣ ರಾವುತನು ನುಡಿಯುತ್ತಿರಲು, ಆ ಪ್ರೌಢಪ್ರತಾಪಿಯಾದ ರಾವುತನು ಹೆಚ್ಚಿನ ಯಾವ ವಿಚಾರವನ್ನೂ ಮಾಡದೆ—"ಸಾಕು-ಸಾಕು, ನಿಮ್ಮ ಮೇಲೆ ಖಡ್ಗವೆತ್ತಲಿಕ್ಕೆ ಇಷ್ಟೇ ಕಾರಣವು ಸಾಕು. ನಿಮ್ಮ ಕಪಟವನ್ನು ನಾನು ಪೂರ್ಣವಾಗಿ ಅರಿತಿರುವೆನು " ಎಂದವನೇ ಆ ತರುಣ ರಾವುತನ ಮೇಲೆ ತನ್ನ ಭಯಂಕರವಾದ ಖಡ್ಗವನ್ನು ಪ್ರಯೋಗಿಸಿದನು; ಅದರಿಂದ ನಮ್ಮ ತರುಣ ರಾವುತನು ಗಾಯ ಹೊಂದಿ ನೆಲಕ್ಕುರುಳಿದನು. ಇದನ್ನು ನೋಡಿದ ಕೂಡಲೆ ಚಿಕ್ಕ ರಾವುತನು ಚಿಟ್ಟನೇ ಚೀರಿ ದೊಪ್ಪನೆ ನೆಲಕ್ಕೆ ಬಿದ್ದು ಮೂರ್ಛೆಹೋದನು.

ಆ ಪೌಢ ರಾವುತನು ಸಿಟ್ಟಿನ ಆವೇಶದಲ್ಲಿದ್ದರೂ ಈ ಬಾಲ ರಾವುತನ ಕರುಣಾಮಯವಾದ ಆರ್ತಧ್ವನಿಯನ್ನು ಕೇಳಿದ ಕೂಡಲೆ ಅವನ ಹೃದಯವು ಕರಗಿ ನೀರಾಗಿ, ತನ್ನಿಂದ ಪ್ರಮಾದವಾದದ್ದಕ್ಕಾಗಿ ಆತನು ಮರಮರನೆ ಮರುಗಿದನು. ಆರ್ತಧ್ವನಿಯಿಂದ ಆ ಬಾಲರಾವುತನು ಸ್ತ್ರೀಯೆಂಬ ಸಂಶಯವು ಆ ವೀರಪುಂಗವನಿಗುಂಟಾಯಿತು ಆ ಪರನಾರೀ ಸೋದರನಾದ ಉದಾತ್ತ ಪುರುಷನು ತಟ್ಟನೆ ಆ ಬಾಲರಾವುತನನ್ನು ಹಿಡಿದೆತ್ತಿ ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಉಪಚರಿಸತೊಡಗಿದನು. ಬಳಿಯ ಜಲಪ್ರವಾಹದ

ಜಲವನ್ನು ನೆತ್ತಿಗೆ ತಟ್ಟುವದಕ್ಕಾಗಿ ಆ ಬಾಲರಾವುತನ ತಲೆಯ ಮುಂಡಾಸವನ್ನು ತೆಗೆಯಲು, ಆತನ ಸಂಶಯ ನಿವಾರಣವಾಗಿ, "ಅಹಹ ! ನಾನೀ ಸ್ತ್ರೀಹತ್ಯೆಯ ಪಾಪಕ್ಕೆ ಗುರಿಯಾದೆನೋ" ಎಂದು ಅಂಜುತ್ತ ಆ ಬಾಲಿಕೆಯನ್ನು ಸೋದರೀಭಾವದಿಂದ ಉಪಚರಿಸಿ ಎಚ್ಚರಗೊಳಿಸಲು ಯತ್ನಿಸತೊಡಗಿದನು. ಆ ವೀರನು ಹೀಗೆ ಕೆಲಹೊತ್ತು ಯತ್ನಿಸುತ್ತಿರಲು, ಆ ರಾವುತ ವೇಷಧಾರಿಯಾದ ಬಾಲಿಕೆಯು ಎಚ್ಚತ್ತು ಕಣ್ತೆರೆದಳು. ಅಷ್ಟರಲ್ಲಿ ಪಾಪಭೀರುವಾದ ಆ ನರಪುಂಗವನು ಆಕೆಯನ್ನು ಕೆಳಗಿರಿಸಿ ದೂರ ನಿಂತುಕೊಂಡಿದ್ದನು!

ಆ ತರುಣಿಯು ಎಚ್ಚತ್ತು ಅತ್ತಿತ್ತ ನೋಡಿ ಮೂರ್ಛೆಹೊಂದಿದ ತನ್ನ ಸಂಗಡಿಗನ ಕಡೆಗೆ ಧಾವಿಸಿದಳು. ಆ ತರುಣನು ಗಾಯಹೊಂದಿ ನಿಶ್ಚೇಷ್ಟನಾಗಿ ಬಿದ್ದಿದ್ದನು. ಆತನನ್ನು ನೋಡಿದ ಕೂಡಲೆ ತರುಣಿಯ ಕಣ್ಣೊಳಗಿಂದ ಬಳಬಳ ನೀರು ಸುರಿಯಹತ್ತಿದವು. ಆಕೆಯು ಗಾಯವನ್ನು ಕಟ್ಟಿ ತರುಣನನ್ನು ಎಚ್ಚರಗೊಳಿಸಲು ಯತ್ನಿಸತೊಡಗಿದಳು. ಅದಕ್ಕೆ ಆ ಹೊಸ ರಾವುತನು ಮನಃಪೂರ್ವಕ ಸಹಾಯ ಮಾಡತೊಡಗಿದನು. ತನ್ನಿಂದಾದ ಪ್ರಮಾದಕ್ಕಾಗಿ ಆ ಹೊಸ ರಾವುತನ ಮುಖವು ಕಳೆಗುಂದಿತ್ತು. ತರುಣಿಯು ಕಣ್ಣೀರು ಒರಿಸಿಕೊಂಡು ದುಃಖವನ್ನು ನುಂಗಿಕೊಳ್ಳಲಿಕ್ಕೆ ಯತ್ನಿಸುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿ ಹೊಸ ರಾವುತನ ಅನುಯಾಯಿಗಳಾದ ಅನೇಕ ಜನ ರಜಪೂತ ರಾವುತರು ಅಲ್ಲಿಗೆ ಬಂದರು. ಒಂದು ಡೋಲಿಯನ್ನು ತರಬೇಕೆಂದು ಆ ಹೊಸ ರಾವುತನು ಅವರನ್ನು ಅಜ್ಞಾಪಿಸಿದನು. ಡೋಲಿಯು ಸಿದ್ಧವಾಗಲು, ಗಾಯಹೊಂದಿದ ರಾವುತನನ್ನು ಅದರಲ್ಲಿ ಮಲಗಿಸಿದರು. ಆ ಹೊಸ ರಾವುತನು ತರುಣಿಗೆ ಕುದುರೆಯನ್ನು ಏರಹೇಳಿ ತಾನೂ ಕುದುರೆಯನ್ನು ಹತ್ತಿದನು. ಬಳಿಕ ಡೋಲಿಸಹಿತವಾಗಿ ಎಲ್ಲರೂ ಒಂದು ಕಾಲುದಾರಿಯಿಂದ ಮೆಲ್ಲಮೆಲ್ಲನೆ ಸಾಗಿದರು. ಸ್ವಲ್ಪ ಮಾರ್ಗಕ್ರಮಿಸಿದ ಮೇಲೆ ಆ ತರುಣಿಯು ಹೊಸ ರಾವುತನನ್ನು ಕುರಿತು ವಿನಯದಿಂದ—"ತಮ್ಮ ಹೆಸರೇನೆ"ಂದು ಪ್ರಶ್ನೆ ಮಾಡಲು ಆ ಪ್ರೌಢ ರಾವುತನು ನಿಟ್ಟುಸಿರು ಬಿಟ್ಟು—"ನನ್ನ ಹೆಸರು ಮಹಾರಾಣಾ ಪ್ರತಾಪಸಿಂಹನು" ಎಂಧು ಉತ್ತರ ಕೊಟ್ಟನು. ಅದನ್ನು ಕೇಳಿದ ಕೂಡಲೆ ತರುಣಿಯು ಆಶ್ಚರ್ಯದಿಂದ ಬೆಚ್ಚಿಬಿದ್ದಳು.

---

೨ನೆಯ ಪ್ರಕರಣ

# ಪ್ರತಾಪನ ಪ್ರತಿಜ್ಞೆ

ಈ ಕಾಲದಲ್ಲಿ ಪ್ರತಾಪಸಿಂಹನು ದಿಲ್ಲಿಯ ಬಾದಶಹನಾದ ಸೇಲಿಮನೊಡನೆ ಯುದ್ಧದಲ್ಲಿ ತೊಡಗಿದ್ದರಿಂದ, ಪ್ರಸಂಗ ಒದಗಿದಂತೆ ಆತನು ಗಿರಿ-ಕಂದರಗಳಲ್ಲಿ ವಾಸಿಸಬೇಕಾಗುತ್ತಿತ್ತು. ಮೊಗಲರು ಪ್ರತಾಪನ ರಾಜ್ಯದಲ್ಲಿಯೇ ಪಾಳಯವನ್ನು ಬಿಟ್ಟು, ಆತನನ್ನು ಮೇವಾಡದಿಂದ ಓಡಿಸಲು ಯತ್ನಿಸುತ್ತಲಿದ್ದರು. ಮಹಾ ಬಲಾಢ್ಯರಾದ ಮೊಗಲರಿಗೆ ಅಲ್ಪ ಬಲನಾದ ಪ್ರತಾಪಸಿಂಹನು ಈಡಾಗುವಂತೆ ಇಲ್ಲದಿದ್ದರೂ, ಪ್ರತಾಪನ ಉಜ್ವಲವಾದ ಸ್ವದೇಶಾಭಿಮಾನವು ಅವನನ್ನು ದಿಲ್ಲಿಯ ಬಾದಶಹನಿಗೆ ಶರಣುಹೋಗಗೊಡಲೊಲ್ಲದು! ಎಷ್ಟು ಕಷ್ಟ-ನಷ್ಟಗಳೊದಗಿದರೂ ಪ್ರತಾಪನು ಮೊಗಲರಿಗೆ ಶರಣು ಹೋಗದೆ ಮಹಾ ಧೈರ್ಯದಿಂದ ಕಾದುತ್ತಲಿದ್ದನು. ಹೀಗಿರುವಾಗ ಮೇಲೆ ಹೇಳಿದಂತೆ ಪ್ರತಾಪನ ಖಡ್ಗಪ್ರಹಾರದಿಂದ ತರುಣ ರಾವುತನು ಗಾಯಹೊಂದಿ ಬಿದ್ದಿದ್ದನು. ಆತನ ಸತ್ಕಾರವನ್ನು ಆ ತರುಣಿಯು ಅಹೋರಾತ್ರಿ ಒಂದೇಸವನೆ ಮಾಡುತ್ತಲಿದ್ದಳು. ಆ ತರುಣ–ತರುಣಿಯರ ಸಂಬಂಧವೇನೆಂಬದನ್ನು ಪ್ರತಾಪನು ವಿಚಾರಿಸಿದ್ದಿಲ್ಲ; ಯಾಕಂದರೆ ದುಃಖಮಗ್ನರಾದವರನ್ನು ಹಾಗೆ ವಿಚಾರಿಸುವ ಮನಸ್ಸು ಆತನಿಗಾಗಲಿಲ್ಲ. ಮರುದಿವಸ ಗಾಯಹೊಂದಿದ ರಾವುತನು ಒಂದು ಗುಹೆಯೊಳಗೆ ಹೊರಸಿನ ಮೇಲೆ ಮಲಗಿದ್ದನು. ಆತನ ಬಳಿಯಲ್ಲಿ ಆ ತರುಣಿಯು ಕುಳಿತಿದ್ದಳು. ಸಮೀಪದಲ್ಲಿ ಒಂದು ಕಲ್ಲಮೇಲೆ ಪ್ರತಾಪಸಿಂಹನು ವಿಷಣ್ಣಮುದ್ರೆಯಿಂದ ಕುಳಿತಿದ್ದನು. ಆಗ ಆ ತರುಣಿಯು ಬಹು ಕಷ್ಟದಿಂದ ಪ್ರತಾಪಸಿಂಹನನ್ನು ಕುರಿತು— ಮಹಾರಾಣಾಜೀ, ನಮಗೆ ಎಷ್ಟು ದುಃಖವಾದರೂ ಸಹಿಸಿಕೊಂಡು ಗಾಯ ಮಾಯುವವರೆಗೆ ಸ್ವಸ್ಥವಾಗಿ ಇರುತ್ತಿದ್ದೆವು. ಆದರೆ ನಮ್ಮಷ್ಟಕ್ಕೆ ನಾವು ಸುಮ್ಮನೆ ಇರುವ ಹಾಗಿಲ್ಲ. ನಾವು ಸುಮ್ಮನೆ ಇದ್ದರೆ ಒಬ್ಬ ತರುಣಿಯ ಸರ್ವಸ್ವದ ಘಾತವಾಗುವದು; ಆದ್ದರಿಂದ ತಮ್ಮ ಮುಂದೆ ಇದ್ದದ್ದನ್ನು ಹೇಳಲೇಬೇಕಾಗಿರುವದು. ಪರಪುರುಷರೊಡನೆ

ನಿಷ್ಕಾರಣ ಮಾತಾಡುವದು ರಜಪೂತ ಸ್ತ್ರೀಯರಿಗೆ ಅಯೋಗ್ಯವು; ಆದರೆ ಮಾಡಲೇನು? ನಮ್ಮ ಸಖಿಯ ಹಿತಕ್ಕಾಗಿ ಮಾತಾಡಲೇಬೇಕಾಗಿರುವದು. ಇಲ್ಲಿಂದ ಐದು ಹರದಾರಿಯ ಮೇಲೆ ಕಾಂಚನಪುರವೆಂಬ ಚಿಕ್ಕ ಸಂಸ್ಥಾನವಿರುವದೆಂಬದು ತಾವರಿಯದ ಸಂಗತಿಯಲ್ಲ. ಆ ಸಂಸ್ಥಾನವು ಇಂದಿನ ವರೆಗೆ ಹಾಡಾಕುಲದ ರಜಪೂತರ ವಶದಲ್ಲಿಯೇ ಇರುವದು; ಆದರೆ ಇನ್ನು ಮುಂದೆ ಮಾತ್ರ ಅದು ಅವರ ವಶದಲ್ಲಿ ಉಳಿಯುವ ಲಕ್ಷಣವಿಲ್ಲ; ಯಾಕಂದರೆ ಆ ಸಂಸ್ಥಾನಕ್ಕೆ ಯೋಗ್ಯ ವಾರಸದಾರರೆಂದರೆ ಒಬ್ಬ ಬಾಲಿಕೆಯು ಮಾತ್ರ ಉಳಿದಿರುವಳು ಆಕೆಯ ಲಗ್ನವಾದ ಕೂಡಲೆ ಅವಳೊಡನೆ ಕಾಂಚನಪುರದ ಅಧಿಪತ್ಯವು ಎರಡನೆಯ ಮನೆತನದವರ ಕೈಸೇರುವದು ಸಹಜವೇ ಸರಿ. ಆ ಬಾಲಿಕೆಯ ಹೆಸರು ವಿಮಲೆಯು. ಆ ವಿಮಲೆಯನ್ನು ಮದುವೆಯಾಗುವದಕ್ಕಾಗಿ ಚೋಡಾವತ್, ಸುಟಾವತ್, ರಾಠೋಡ, ತುವರ ಮುಂತಾದ ಕುಲಗಳೊಳಗಿನ ಅನೇಕ ವೀರರು ಕಾಂಚನಪುರದ ವೃದ್ಧ ಅರಸನನ್ನು ಕೇಳಿದರು; ಆದರೆ ಆ ವೀರರಲ್ಲಿ ಯಾವನೂ ವಿಮಲೆಯ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಆಕೆಯ ವಿವಾಹದ ಮಾತು ಅಲ್ಲಿಗೇ ನಿಂತಿತು; ಆದರೆ ವಿಲಾಸನಗರದ ಠಾಕೂರನಿಗೆ ಮಾತ್ರ ವಿಮಲೆಯು ತನ್ನನ್ನು ನಿರಾಕರಿಸಿದ್ದು ಸರಿದೋರಲಿಲ್ಲ ಅವನು ಸಿಟ್ಟಾಗಿ ಸೇಡು ತೀರಿಸಿಕೊಳ್ಳುವ ಹಂಚಿಕೆ ಹಾಕುತ್ತಿದ್ದನು. ವಿಮಲೆಯು ತನಗೆ ಪ್ರಾಪ್ತವಾಗದಿದ್ದರೂ, ಹೊತ್ತು ಸಾಧಿಸಿ ಹ್ಯಾಗಾದರೂ ಮಾಡಿ ಆಕೆಯನ್ನು ಬಾದಶಹನ ಜನಾನಖಾನೆಗಾದರೂ ಎಳೆದೊಯ್ದು ಸೇಡು ತೀರಿಸಿಕೊಳ್ಳಬೇಕೆಂದು ದುರ್ವಿಚಾರವನ್ನು ಆತನು ನಡಿಸಿದನು. ಮಹಾರಾಣಾಜೀ, ಆತನ ಈ ದುರಾಲೋಚನೆಯ ಸುದ್ದಿ ಹತ್ತಿದ್ದರಿಂದ ನಾನು ಬಹಳ ಚಿಂತೆಗೊಳಗಾದೆನು. ನಾನು ಕಾಂಚನಪುರದಲ್ಲಿಯೇ ಹುಟ್ಟಿ ಚಿಕ್ಕಂದಿನಿಂದ ವಿಮಲೆಯ ಸಂಗಡಲೇ ಅರಮನೆಯಲ್ಲಿ ಬೆಳೆದಿರುವೆನು. ವಿಮಲೆಯ ಕಾಲಲ್ಲ ವಿಲಾಸನಗರ-ಕಾಂಚನಪುರಗಳ ರಜಪೂತರು ಹಲವು ಸಾರೆ ಕಾದಿದರು. ಈ ಕದನದಲ್ಲಿಯೇ ನನ್ನ ಪೂಜ್ಯ ತಂದೆಯು ಕಾಂಚನಪುರದ ಪಕ್ಷಕಟ್ಟಿ ಕಾದಿ ಮರಣಹೊಂದಿದನು. ಪತಿವ್ರತೆಯಾದ ನನ್ನ ತಾಯಿಯು ನನ್ನ ತಂದೆಯ ಕೂಡ ಸತಿಹೋದಳು. ಅಂದಿನಿಂದಂತು ನಾನು ವಿಮಲೆಯನ್ನು ಬಿಟ್ಟು ಇರದಾಯಿತು. ಮುಂದೆ ನನ್ನ ಮದುವೆಯಾದ ಬಳಿಕ ನಾನು ಚಂದನಗಡದಲ್ಲಿರಹತ್ತಿದೆನು;

ಆದರೂ ನಮ್ಮಲ್ಲಿಯ ಪರಸ್ಪರ ಪ್ರೇಮವು ಸ್ವಲ್ಪವೂ ಕಡಿಮೆಯಾಗಲಿಲ್ಲ. ನಾನು ಚಂದನಗಡಕ್ಕೆ ಹೋದ ಸ್ವಲ್ಪ ದಿನಗಳಲ್ಲಿಯೇ ವಿಮಲೆಯ ತಂದೆಯು ಸ್ವರ್ಗಸ್ಥನಾದನು; ಅಂದಿನಿಂದ ದುರ್ದೈವಿಯಾದ ವಿಮಲೆಯು ಅನಾಥ ಳಾದಂತಾಯಿತು!

ವಿಮಲೆಯ ದುರ್ದಶೆಯು ಇಷ್ಟರಿಂದಲೇ ತೀರಲಿಲ್ಲ. ವಿಲಾಸನಗರದ ಅಧಮ ಠಾಕುರನು ಅವಳೊಡನೆ ಕಪಟಾಚರಣೆಯನ್ನು ನಡೆಸಿದನು ವಿಮಲೆ ಗಾದರೂ ಅವನ ಆಚರಣೆಯ ವಿಷಯವಾಗಿ ಸಂಶಯವುಂಟಾಯಿತು. ದಿನ ದಿನಕ್ಕೆ ಹೊಸ ಹೊಸ ಸುದ್ದಿಗಳು ವಿಮಲೆಯ ಕಿವಿಗೆ ಬೀಳಹತ್ತಿದವು. ಪ್ರಬಲ ರಾದ ಕಾಂಚನಪುರದವರಿಗೆ ಪ್ರತ್ಯಕ್ಷ ಎದುರಾಗಿ ನಿಲ್ಲುವ ಸಾಮರ್ಥ್ಯವು ಹೇಡಿಗಳಾದ ವಿಲಾಸನಗರದವರಲ್ಲಿದ್ದಿಲ್ಲ ಇದಲ್ಲದೆ, ಒಬ್ಬ ಪಿತೃಹೀನಳಾದ ಬಾಲಿಕೆಯ ಮೇಲೆ ಕೈ ಎತ್ತಿದರೆ, ಜನರು ಏನು ಅಂದಾರೆಂಬ ಅಂಜಿಕೆಯು ಅಧಮ ಠಾಕೂರನಿಗೆ ಅಡ್ಡ ಬರುತ್ತಿತ್ತು. ಅದರಿಂದ ಅವನು ಗುಪ್ತ ರೀತಿ ಯಿಂದಲೇ ಮೋಸಗೊಳಿಸಲು ಹವಣಿಸಿದನು. ಈ ಕಪಟದ ಸುದ್ದಿಯು ವಿಮ ಲೆಗೆ ಹತ್ತಿದಕೂಡಲೆ, ಅವಳು ನನಗೆ ಕಾಂಚನಪುರಕ್ಕೆ ಹೊರಟುಬರಬೇಕೆಂದು ಪತ್ರ ಬರೆದಳು. ಆ ಪ್ರಕಾರ ನಾವು ಉಭಯತರು ಕಾಂಚನಪುರಕ್ಕೆ ಹೋದೆವು. ಆದರೆ ಅಲ್ಲೇನಿದೆ! ಅರಮನೆಯು ಆರ್ತಸ್ವರದಿಂದ ನಡುಗು ತ್ತಿತ್ತು! ಎತ್ತ ನೋಡಿದತ್ತ ಸೇವಕ–ದಾಸಿಯರ ಶೋಕವೇ ಕೇಳಬರು ತ್ತಿತ್ತು! ಇದನ್ನು ಕಂಡು ನನ್ನ ಎದೆಯೊಡೆದು ನೀರಾಯಿತು." ಹೀಗೆ ಹೇಳುತ್ತಿರುವಾಗ ಹೊರಸಿನ ಮೇಲೆ ಬಿದ್ದಿದ್ದ ತರುಣನು ಒಮ್ಮೆಲೆ ನಿಟ್ಟುಸಿರು ಬಿಟ್ಟನು. ತರುಣಿಯ ಕಣ್ಣುಗಳು ನೀರಿನಿಂದ ತುಂಬಿ ತುಳುಕಹತ್ತಿದವು. ಅವಳು ಅಶ್ರುಗಳನ್ನೊರಸಿಕೊಂಡು ಪುನಃ ತನ್ನ ವೃತ್ತಾಂತವನ್ನು ಹೇಳ ತೊಡಗಿದಳು.

"ರಾಣಾಜೀ, ನನ್ನ ಮುಂದೆ ದಾಸಿಯರು ಹೇಳಿದ್ದೇನಂದರೆ—ಮುನ್ನಾ ದಿನ ರಾತ್ರಿ ವಿಮಲೆಯು ನಿತ್ಯದಂತೆ ತನ್ನ ಮಹಾಲಿನಲ್ಲಿ ಮಲಗಿಕೊಂಡಳಂತೆ. ವಾಡಿಕೆಯಂತೆ ಹೊರಗೆ ದಂಡಾಳುಗಳ ಕಾವಲು ಇದ್ದೇ ಇತ್ತಂತೆ. ದಾಸಿಯು ಮುಂಜಾವಿನಲ್ಲಿ ವಿಮಲೆಯನ್ನು ಎಬ್ಬಿಸಹೋಗಲು, ಬಾಗಿಲವು ಗಟ್ಟಿಯಾಗಿ ಇಕ್ಕಿತ್ತು. ಗಾಢನಿದ್ರೆ ಹತ್ತಿರಬಹುದೆಂದು ತುಸು ಹೊತ್ತು ತಡೆದಳು. ತಾಸ

ರಡು ತಾನಾದರೂ ವಿಮಲೆಯು ಏಳಲಿಲ್ಲ. ಪ್ರತಿನಿತ್ಯ ಬೇಗ ಏಳುವವಳು ಇನ್ನೂ ಯಾಕೆ ಎದ್ದಿರಲಿಕ್ಕಿಲ್ಲ ? ಮೈಯಲ್ಲಿ ಸ್ವಸ್ಥವಿರಲಿಕ್ಕಿಲ್ಲವೆ ? ಎಬ್ಬಿಸಿ ಉಪಚಾರ ಮಾಡಬೇಕೆಂದು, ದಾಸಿಯರು— " ದೇವಿಯವರೇ, ಏಳಿರಿ ; ಮೈ ತೊಳೆದುಕೊಳ್ಳುವ ಹೊತ್ತಾಯಿತು." ಎಂದು ಒದರಿದಳಂತೆ. ಉತ್ತರವೇ ಇಲ್ಲ. ಸೇವಕರು ಬಹಳ ಹೊತ್ತು ಒದರಿದರು. ಬಾಗಿಲ ತೆರೆಯಲಿಲ್ಲ. ಆಗ ಅನುಮಾನಗೊಂಡು ಬಾಗಿಲ ಮುರಿದು, ಒಳಹೊಕ್ಕು ನೋಡುತ್ತಾರೆ, ಅಲ್ಲೇನಿದೆ !, ಸೇವಕ–ದಾಸಿಯರು ಗಾಬರಿಯಾಗಿ ಶೋಕ ಮಾಡಹತ್ತಿದರು ಅಷ್ಟರಲ್ಲಿ ನಾವೂ ಅಲ್ಲಿಗೆ ಹೋದೆವು.

" ಅಯ್ಯೋ ! ಪ್ರಿಯಸಖಿ !! ವಿಮಲಾದೇವೀ !!! ನೀನು ಈಗ ಎಲ್ಲಿರುವಿ ! ನನಗೆ ನೀನು ಹ್ಯಾಗೆ ದೊರಕುವೆ ? ನೀನು ಕಾರಾಗೃಹದಲ್ಲಿರುವೆಯೋ, ಅಥವಾ, ಈ ಜಗತ್ತನ್ನೇ ಬಿಟ್ಟು ಹೋದೆಯೋ ! ರಾಣಾಜಿಯವರೆ, ತಾವು ಪರಮ ಪುಣ್ಯಶಾಲಿಗಳು, ನಾವು ಏನು ಅಪರಾಧ ಮಾಡಿದ್ದೆವೆಂದು ಇವರನ್ನು ( ಹೊರಸಿನ ಮೇಲೆ ಬಿದ್ದ ತರುಣನ ಕಡೆಗೆ ತೋರಿಸಿ) ಈ ದುರ್ದೆಶೆಗೆ ಈಡುಮಾಡಿದಿರಿ ? ಇನ್ನು ನನ್ನ ವಿಮಲೆಯ ಬಿಡುಗಡೆಯನ್ನು ಮಾಡುವವರಾರು?" ಎಂದು ನುಡಿಯುತ್ತಿರಲು, ತರುಣಿಯ ದುಃಖ ಪ್ರಹೆಚ್ಚಾಗಿ, ಆಕೆಯ ಬಾಯಿಂದ ಶಬ್ದಗಳು ಹೊರಡದಂತಾದವು; ಅವಳು ಒಂದೇಸವನೇ ಕಣ್ಣೀರು ಸುರಿಸಹತ್ತಿದಳು. ಪ್ರತಾಪಸಿಂಹದ ವಜ್ರಹೃದಯವು ಕೂಡ ಕರಗಿ ನೀರಾಯಿತು. ಅವನ ಕಣ್ಣೊಳಗಿಂತ ಎಂದೂ ಇಲ್ಲದೆ ಈ ಹೊತ್ತು ಎರಡು ದುಃಖಾಶ್ರುಗಳು ಉದುರಿದವು. ಆಗ ಅವನು ದುಃಖದಿಂದಲೂ, ಆವೇಶದಿಂದಲೂ ಕೂಡಿದ ಸ್ವರದಿಂದ ಅಂದದ್ದೇನಂದರೆ–"ಈ ಪ್ರತಾಪಸಿಂಹನ ದೇಹದಲ್ಲಿ ಪ್ರಾಣವೂ, ಕೈಯಲ್ಲಿ ಖಡ್ಗವೂ ಇರುವವರೆಗೆ ನಿನ್ನ ಪ್ರಿಯ ಸಖಿಯಾದ ವಿಮಲೆಯ ವಿಷಯಕ್ಕೆ ಚಿಂತೆಯಾಕೆ ? " ಎಂದು ನುಡಿದನು. ಆದರೆ ಆ ಶಬ್ದಗಳನ್ನು ಕೇಳುವಷ್ಟು ಪದ್ಮಾವತಿಯ ಮನಸ್ಸಿನ ಸ್ಥೈರ್ಯವಿದ್ದಿಲ್ಲ. ಆಕೆಯು ಮೋರೆಯ ಮೇಲೆ ಸೆರಗು ಹಾಕಿ ಬಿಕ್ಕಿ ಬಿಕ್ಕಿ ಅಳಹತ್ತಿದಳು. ಆಗ ಹೊರಸಿನ ಮೇಲೆ ಬಿದ್ದಿದ್ದ ತರುಣನು–"ರಾಣಾಜಿಯವರೇ, ಮುಂದಿನ ಸಂಗತಿಯನ್ನು ಹೇಳುವೆನು ಚಿತ್ತಯಿಸಬೇಕು. ನಾವು ಕಾಂಚನಪುರಕ್ಕೆ ಹೋಗಿ, ಈ ಅನರ್ಥವನ್ನು ನೋಡಿ ದುಃಖದಿಂದ ಅರಮನೆಯ ಉಪ್ಪರಿಗೆಯನ್ನೇರಿದೆವು.

ವಿಮಲೆಯ ಶಯನಮಂದಿರದೊಳಗಿನ ವಿಚಿತ್ರ ಸ್ಥಿತಿಯನ್ನು ಕಂಡಕೂಡಲೆ ನಮ್ಮ ಮೈಮೇಲಿನ ಕೂದಲುಗಳು ನೆಟ್ಟಗಾದವು. ವಿಮಲೆಯು ಅಲ್ಲಿದ್ದಿಲ್ಲ– ಅವಳ ಹಾಸಿಗೆಯು ಅಸ್ತವ್ಯಸ್ತವಾಗಿತ್ತು. ಅವಳ ವಸ್ತ್ರಗಳು ರಕ್ತಮಯ ವಾಗಿ ಅಲ್ಲಿಂದಲ್ಲೆ ಬಿದ್ದಿದ್ದವು. ಕೋಣೆಯಲ್ಲಿ ಎಲ್ಲ ಕಡೆಗೂ ರಕ್ತ-ಮಾಂಸಾದಿ ಗಳು ಸಿಡಿದಿದ್ದವು. ಸೂಕ್ಷ್ಮರೀತಿಯಿಂದ ಉಪ್ಪರಿಗೆಯನ್ನೆಲ್ಲ ಶೋಧಿಸಿದೆವು. ಕಿಡಿಕೆಗಳ ಫಡಕುಗಳು ಗಟ್ಟಿಯಾಗಿ ಇಕ್ಕಿದ್ದವು. ಕೊಲೆ ಮಾಡುವ ಜನರು ಯಾವ ಕಡೆಯಿಂದ ಬಂದರೆಂಬದು ತಿಳಿಯದಾಯಿತು. ಅಷ್ಟರಲ್ಲಿ ಅವಳ ಹಾಸಿಗೆಯ ಮೇಲೆ ಒಂದು ಬರೆದ ಕಾಗದವು ನಮ್ಮ ದೃಷ್ಟಿಗೆ ಬಿದ್ದಿತು. ಅದರ ಮೇಲೆ ವಿಮಲಾದೇವಿಯ ಅಕ್ಷರಗಳೇ ಇದ್ದವು. ಇಕೋ, ಇದೇ ಆ ಪತ್ರವು." ಎಂದು ನುಡಿದು ಆ ಪತ್ರವನ್ನು ಪ್ರತಾಪಸಿಂಹನ ಕೈಯಲ್ಲಿ ಕೊಟ್ಟನು. ಪ್ರತಾಪಸಿಂಹನು ಆ ಪತ್ರವನ್ನು ತಕ್ಕೊಂಡು ತಾನೇ ಓದಿ ದನು. ಆ ಪತ್ರದಲ್ಲಿ

"ಸರದಾರ ಅಮರಸಿಂಹ ಚಂದನಗಡ ಇವರಿಗೆ—

ಇತ್ತಿತ್ತಲಾಗಿ ನನಗೆ ಬಹಳೇ ಅಸ್ವಸ್ಥತೆಯುಂಟಾಗಹತ್ತಿದೆ. ಪದ್ಮಾವತಿ ಯನ್ನು ಇತ್ತ ಕಡೆಗೆ ಕಳಿಸಿಕೊಡಬೇಕು. ತಾವೂ ಹೊರಟು ಬರಬೇಕು. ಯಾಕಂದರೆ, ಏನಾದರೂ ಒಂದು ದುರ್ಧರ ಪ್ರಸಂಗವು ಒದಗುವದೆಂಬಂತೆ ನನಗೆ ತೋರುತ್ತದೆ."

ವಿಮಲೆ

ಪತ್ರವನ್ನು ಓದಿ, ಮಹಾರಾಣಾ ಪ್ರತಾಪಸಿಂಹನು— "ಹಾಗಾದರೆ, ತಾವೇ ಏನು ? ಸರದಾರ ಅಮರಸಿಂಹರೆಂಬುವರು ? ಪತ್ರವನ್ನು ತಮ್ಮನ್ನು ಉದ್ದೇಶಿಸಿಯೇ ಬರೆದಿರುವಂತೆ ತೋರುತ್ತದೆ." ಎಂದು ಅಂದನು.

"ಅಹುದು ನಾನೇ ಅಮರಸಿಂಹನು" ಎಂದು ನುಡಿದು ಆ ಸರದಾ ರನು ಮುಂದಿನ ಸುದ್ದಿಯನ್ನು ಹೇಳಹತ್ತಿದನು. — "ಮಹಾರಾಣಾಜೀ, ಮುಂದೆ ನಾವು ಆ ಅರಮನೆಯಲ್ಲಿ ಬಹಳ ಹೊತ್ತಿನವರೆಗೆ ಶೋಧಮಾಡಿದೆವು. ಆದರೆ ಏನೂ ಗೊತ್ತು ಹತ್ತಲಿಲ್ಲ. ಅಷ್ಟರಲ್ಲಿ ಈಕೆಗೆ (ಪದ್ಮಾವತಿಗೆ) ಆ ಮಹಾ

ಲಿಗೆ ಒಂದು ಕಳ್ಳದಾರಿ ಇದ್ದದ್ದು, ಅಕಸ್ಮಾತ್ತಾಗಿ ನೆನಪಾಯಿತು ಆ ದಾರಿಯು ಅರಮನೆಯ ಜನರ ಹೊರತು ಯಾರಿಗೂ ಗೊತ್ತಿದ್ದಿಲ್ಲ. ಲಕ್ಷವಿಟ್ಟು ಹುಡುಕಲು, ಆ ದಾರಿಯು ನಮಗೆ ಸಿಕ್ಕಿತು. ಕೆಲವು ಸೇವಕರನ್ನು ಕರಕೊಂಡು ನಾನು ಕೆಳಗಿಳಿದೆನು. ದಾರಿಯಲ್ಲಿ ಕತ್ತಲೆ ಇದ್ದದ್ದರಿಂದ ದೀವಟಿಗೆಗಳನ್ನು ಹಚ್ಚಿಸಿಕೊಂಡು ನಾಗಿದೆವು. ಆ ಬೆಳಕಿನಲ್ಲಿ ವಿಮಲೆಯ ಒಂದು ಮುತ್ತಿನ ಸರವು ಹರಿದು ಬಿದ್ದದ್ದು ನಮಗೆ ಸಿಕ್ಕಿತು. ಇಷ್ಟರಿಂದಲೇ ಇವಳನ್ನು ಇದೇ ದಾರಿಯಿಂದ ಅಪಹರಿಸಿಕೊಂಡು ಹೋಗಿರಬಹುದೆಂದು ಅನುಮಾನವಾಯಿತು. ಮಹಾಲಿನಲ್ಲಿಯ ರಕ್ತವನ್ನು ನೋಡಿದ ಕೂಡಲೆ, ವಿಮಲೆಯ ಜೀವದ ವಿಷಯಕ್ಕೆ ನನಗೆ ಸಂಶಯವು ಉತ್ಪನ್ನವಾಗಿತ್ತು; ಆದರೆ ಮಾರ್ಗದಲ್ಲಿಯ ಈ ಸ್ಥಿತಿಯನ್ನು ನೋಡಲು, ವಿಮಲೆಯ ಶತ್ರುವು ವಿಮಲೆಯ ಶೋಧಕ್ಕೆ ಪ್ರತಿಬಂಧವಾಗುವದಕ್ಕಾಗಿ ಬುದ್ಧಿಪೂರ್ವಕ ಈ ತಂತ್ರವನ್ನು ಒಡ್ಡಿರುವನೆಂಬ ಸಂಶಯವು ನಮಗೆ ಉತ್ಪನ್ನವಾಯಿತು. ಅದಕ್ಕಾಗಿಯೇ ಅವರು ಶಯನ ಮಂದಿರದಲ್ಲಿ ಹಾಗೆ ಅವ್ಯವಸ್ಥೆಯನ್ನು ಮಾಡಿರುವರೆಂಬುದು ನಿಶ್ಚಯವಾಯಿತು. ಈ ಗುಪ್ತ ದಾರಿಯು ಊರಹೊರಗಿನ ಒಂದು ದೇವಾಲಯಕ್ಕೆ ಹೋಗಿತ್ತು. ಗರ್ಭಗುಡಿಯಲ್ಲಿದ್ದ ಈ ದಾರಿಯ ಬಾಯಿಮುಚ್ಚಳದ ಕಲ್ಲು ತೆಗೆದು, ನಾವು ಗುಡಿಯೊಳಗೆ ಹೋದೆವು. ಅಷ್ಟರಲ್ಲಿ ಅಲ್ಲಿಯ ಪೂಜಾರಿಯು ಆಶ್ಚರ್ಯಚಕಿತನಾಗಿ ನನ್ನೆದುರಿಗೆ ಬಂದು ನಿಂತನು. ನಾನು ಅವನಿಗೆ-- " ಈ ಗುಡಿಯಲ್ಲಿ ಯಾರು ವಾಸಿಸುತ್ತಾರೆ ? " ಎಂದು ಪ್ರಶ್ನೆ ಮಾಡಿದೆನು.

ಆಗ ಪೂಜಾರಿಯು ತೀರ ಗಾಬರಿಯಾಗಿ— " ನಾನೇ ವಾಸಿಸುತ್ತೇನೆ, ಸ್ವಾಮಿ, ಆದರೆ ಮಾಡುವದೇನು ? ನಮ್ಮಂಥ ಬಡವರನ್ನು ಯಾರು ಕೇಳುತ್ತಾರೆ ? ಯಜಮಾನರಾದ ಬಾಪ್ಪಾಜಿಯವರು ನಮ್ಮ ಮೇಲೆ ಬಹಳ ಪ್ರೇಮ ಮಾಡುತ್ತಿದ್ದರು. ಆದರೆ ಅವರು ಹೋದರು ! ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು ! ಎಲ್ಲರಿಗೂ ಒಂದಿಲ್ಲೊಂದು ದಿನ ಮರಣವು ನಿಶ್ಚಿತವಾದದ್ದು. ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ್ದೇನಂದರೆ.......... ಇನ್ನೂ ಹೀಗೆಯೇ ಆ ಪೂಜಾರಿಯ ಬಡಬಡಿಕೆಯು ಎಷ್ಟು ಹೊತ್ತು ನಡೆಯುತ್ತಿತ್ತೋ ತಿಳಿಯದು. ಅಷ್ಟರಲ್ಲಿ ನಾನು ಗದ್ದರಿಸಿ— " ಸಾಕು. ನಿನ್ನ ಬಡಬಡಿಕೆ. ಸಾಕು. ನನ್ನ ಪ್ರಶ್ನೆಗೆ ಉತ್ತರ ಕೊಡು. ಈ ವಾರದಲ್ಲಿ ಇಲ್ಲಿಗೆ

ಸಿಪಾಯರಂಥ ಜನರು ಯಾರಾದರೂ ಬಂದಿದ್ದರೋ ಹ್ಯಾಗೆ? ಬೇಗ ಹೇಳು ಅಂದರೆ ನಿನಗೆ ಇನಾಮು ಕೊಡುವೆನು. ನಿಜವಾದದ್ದನ್ನು ಹೇಳದಿದ್ದರೆ ನಿನ್ನ ಚಂಡು ಹಾರಿಸಿ ಇದೇ ಗುಡಿಯಲ್ಲಿಯೇ ಅದನ್ನು ತೂಗಬಿಡುವೆನು." ಎಂದು ಆರ್ಭಟಿಸಿದ ಕೂಡಲೆ ಪೂಜಾರಿಯು ಗದಗದ ನಡುಗುತ್ತ—"ಮಹಾಸ್ವಾಮಿ, ಹೇಳುತ್ತೇನೆ. ವಿಮಲಾದೇವಿಯವರು ಇಲ್ಲದಂತಾದ ದಿವಸವೇ ಸಂಜೆಯ ಮುಂದೆ ಹದಿನೈದು ಜನ ರಾವುತರು ಈ ಗುಡಿಯಲ್ಲಿ ಇಳಕೊಂಡಿದ್ದರು. ಅವರ ಕೂಡ ಒಂದು ಮೇಣೆಯು ಇತ್ತು. ಈ ಜನರು ಆರುತಾಸು ರಾತ್ರಿ ಕಳೆದು ಹೋದ ಮೇಲೆ ಹೊರಟುಹೋದರು" ಎಂದು ಪೂಜಾರಿಯು ಹೇಳಿದನು.

ಇಷ್ಟು ಗೊತ್ತಾದ ಮೇಲೆ ನಾನು ವಿಲಾಸನಗರಕ್ಕೆ ತೆರಳಿದೆನು. ಗುಪ್ತ ವೇಷದಿಂದ ನಾನು ಅಲ್ಲಿಗೆ ಹೋಗಿ, ಆ ನೀಚನಾದ ಠಾಕುರನು ಸೇಲಿಮನ ಕಡೆಗೆ ಹೋಗಿರುವನೆಂಬದನ್ನು ತಿಳಕೊಂಡೆನು. ನನ್ನ ಒಬ್ಬ ಮಿತ್ರನು ಗುಪ್ತ ವೇಷದಿಂದ ರಾಜಾ ಮಾನಸಿಂಗನ ಸೇವಕನಾಗಿರುವನು. ಅವನ ಮುಖಾಂತರ, ವಿಮಲೆಯ ಬಿಡುಗಡೆಯ ಬಗ್ಗೆ ಯತ್ನ ಮಾಡಬೇಕೆಂಥು ಅತ್ತ ಕಡೆಗೆ ಹೊರಟೆನು. ಬೇಡ ಬೇಡವೆಂದರೂ ಈಕೆಯು (ಪದ್ಮಾವತಿಯು) ನನ್ನ ಸಂಗಡ ಬಂದಳು. ನಾವು ತೀವ್ರವೇ ಅಲ್ಲಿಗೆ ಮುಟ್ಟಿದ್ದರೆ, ಏನಾದರೂ ಆಲೋಚನೆ ಮಾಡಿ ಬಿಡುಗಡೆ ಮಾಡುವದಕ್ಕೆ ನೆಟ್ಟಗಾಗುತ್ತಿತ್ತು. ಆದರೆ, ತಾವು ನಮ್ಮ ವಿಷಯಕ್ಕೆ ನಿಷ್ಕಾರಣವಾಗಿ ಸಂಶಯ ಪಟ್ಟದ್ದರಿಂದ ನನ್ನದು ಈ ಹಾಡಾಯಿತು. ಪಾಪ, ಆ ಹತಭಾಗ್ಯಳಾದ ವಿಮಲೆಯನ್ನು ತನ್ನ ಅದೃಷ್ಟದಲ್ಲಿದ್ದದ್ದನ್ನು ಅನುಭೋಗಿಸಬಿಟ್ಟು ನಾನು ಸುಮ್ಮನೆ ಕೂಡ್ರುವ ಹೊತ್ತು ಬಂದಿತು. ಸಿಟ್ಟಾಗಬೇಡಿರಿ, ರಾಣಾಜಿಯವರೆ, ಇದೆಲ್ಲ ತಮ್ಮ ಕ್ರೂರ ಖಡ್ಗದ ಪ್ರಭಾವವು. ಈಹೊತ್ತು ಒಬ್ಬ ರಜಪೂತನ ಖಡ್ಗದ ಪ್ರಭಾವದಿಂದಲೇ ಒಬ್ಬ ರಜಪೂತ ಕನ್ನಿಕೆಯು ಮುಸಲ್ಮಾನರ ಅಂತಃಪುರಕ್ಕೆ ಎಳೆದೊಯ್ಯಲ್ಪಡುತ್ತಿರುವಳು. ಇದು ಸಂಶಯ ಪಿಶಾಚದ ಮಹಿಮೆಯ ಫಲವು."

ಪ್ರತಾಪಸಿಂಹನ ತೇಜಸ್ವಿಯಾದ ಮೋರೆಯು ಹಂಚು ಬಡಿದಂತಾಯಿತು. ಅವನು ಮೆಲ್ಲನೆ ನುಡಿದದ್ದು— "ಸರದಾರಸಾಹೇಬರೆ, ಈ ಹೊತ್ತು ನನ್ನಿಂದ ಮಹತ್ತರವಾದ ಪಾಪವಾದದ್ದು ನಿಜವು; ಆದರೆ ಈ ಪಾಪದ ಕ್ಷಾಲನೆಯನ್ನು ನಾನು ಹ್ಯಾಗೆ ಮಾಡಬೇಕೆಂಬುವದನ್ನು ನಿಶ್ಚಯಿಸಿರುವೆನು.

ನಾನು ನಿಮಗೆ ವಿಮಲೆಯನ್ನು ತಂದೊಪ್ಪಿಸುವೆನು, ಇಲ್ಲವೆ, ಇದೇ ಹಳದೀ ಘಟ್ಟದಲ್ಲಿ ಪ್ರಾಣ ಬಿಡುವೆನು. ಇದೇ ನನ್ನ ಪ್ರತಿಜ್ಞೆಯು. ತಾವು ಉಭಯ ತರು ಮೊಗಲರ ಕೂಡ ಒಳಸಂಚು ಮಾಡಲು ಓಡಿ ಹೋಗುತ್ತಿರುವಿರೆಂದು ಹೇಳಿದ ಆ ದುಷ್ಟ ರಜಪೂತನು ನನಗೆ ಸಿಕ್ಕರೆ ನೆಟ್ಟಗಾಗುವದು. ಪ್ರತಾಪ ಸಿಂಹನಿಗೆ ವಂಚಿಸಿದವರಿಗೆ ಯಾವ ಪ್ರಕಾರದ ಪ್ರಾಯಶ್ಚಿತ್ತವಾಗುತ್ತದೆಂಬುದು ಅವನಿಗೆ ತಿಳಿಯುವದು ಅತ್ಯವಶ್ಯವದೆ ಅವನನ್ನು ಹಿಡಿದು ತರಲಿಕ್ಕೆ ನಾನು ನನ್ನ ಸೇವಕರನ್ನು ಕಳಿಸಿರುವೆನು. ಆದರೆ ಅವರು ಈವರೆಗೂ ಯಾಕೆ ಬರಲಿಲ್ಲವೊ ತಿಳಿಯದು." ಎಂದು ನುಡಿಯುತ್ತಿರಲು ಇಷ್ಟರಲ್ಲಿ ಹತ್ತೆಂಟು ಜನ ಸೈನಿಕರು ಒಬ್ಬ ಸವಾರನನ್ನು ಹೆಡಮುರಿಗೆ ಕಟ್ಟಿ ತಂದರು! ಅವರು ಸಮೀಪಕ್ಕೆ ಬಂದಕೂಡಲೆ ಪದ್ಮಾವತಿಯು ವಿಲಾಸನಗರದ ಠಾಕೂರನ ಗುರುತು ಹಿಡಿದಳು. ತನ್ನನ್ನು ಕಪಟೋಕ್ತಿಯಿಂದ ಮೋಸಗೊಳಿಸಿದ ಆ ದುಷ್ಟ ಠಾಕೂರನನ್ನು ನೋಡಿದ ಕೂಡಲೆ ರಾಣಾನು ಸಂತಪ್ತನಾದನು. ಅವನು, ಆ ಠಾಕೂರನ ಶಿರಚ್ಛೇದ ಮಾಡಲಿಕ್ಕೆ ತತ್ಕ್ಷಣವೇ ತನ್ನ ಸೈನಿಕರಿಗೆ ಆಜ್ಞಾಪಿಸಿದನು.

ವಿಮಲೆಯನ್ನು ಮುಟ್ಟಿಸಿ ಸೇಲಿಮನ ಛಾವಣಿಯಿಂದ ಹಿಂತಿರುಗಿ ಬರುವಾಗ, ಠಾಕೂರನು ಹಾದಿಯಲ್ಲಿ ಅಮರಸಿಂಹನನ್ನು ಕಂಡಿದ್ದನು. ಅಮರ ಸಿಂಹನು ವಿಮಲೆಯ ಬಿಡುಗಡೆಯ ಪ್ರಯತ್ನ ಮಾಡುವನೆಂಬುದು ಠಾಕೂರನಿಗೆ ಗೊತ್ತಿದ್ದಿತು. ಈ ಸಂಗತಿಯನ್ನು ಸೇಲಮನಿಗೆ ಸೂಚಿಸಿ ಅಮರಸಿಂಹನ ನಾಶವನ್ನು ಠಾಕೂರನು ಸಹಜವಾಗಿ ಮಾಡಿಸಬಹುದಾಗಿತ್ತು. ಆದರೆ ಇವನ ನಾಶವು ದಾರಿಯಲ್ಲಿಯೇ ಆಗುವಂತೆ ಮಾಡುವದು ಉಚಿತವೆಂದು ಠಾಕೂರನು ಯೋಚಿಸಿದನು, ಆದರೆ ಶೂರನಾದ ಅಮರಸಿಂಹನಿಗೆ ಎದುರಾಗಿ ನಿಲ್ಲುವ ಧೈರ್ಯವು ಈ ಪುಕ್ಕ ಠಾಕೂರನಿಗಿದ್ದಿಲ್ಲ. ಆದುದರಿಂದ ಅವನು ಕಂಟಕೇನೈವ ಕಂಟಕಮ್ ಎಂಬಂತೆ ಶತ್ರುವಿನಿಂದಲೇ ಶತ್ರುವಿನ ಸಂಹಾರಮಾಡಿಸಬೇಕೆಂದು ಯೋಚಿಸಿದನು. ಅದೇ ಹೊತ್ತಿಗೆ ಪ್ರತಾಪಸಿಂಹನು ಒಬ್ಬನೇ ಅರಣ್ಯದಲ್ಲಿ ಹೋಗುವದನ್ನು ನೋಡಿ ಠಾಕೂರನು ಅವನ ಬಳಿಗೆ ಹೋಗಿ--"ಮಹಾರಾಣಾಜೀ, ಇಬ್ಬರು ರಾವುತರು ಮೊಗಲರ ಕೂಡ ನಿಮ್ಮ ವಿರುದ್ಧವಾಗಿ ಒಳಸಂಚು ಮಾಡಲು ಹೊರಟಿರುವರು. ಅವರನ್ನು ಹುಡುಕಿ ನೀವು

ಅವರ ಪಾರಿಪತ್ಯ ಮಾಡಬೇಕು." ಎಂದು ಹೇಳಿ, ತಾನು ನಿಲ್ಲುವಂತಿಲ್ಲವೆಂದು ಜಾರಿ ಹೊರಟು ಹೋಗಿದ್ದನು. ಶೀಘ್ರ ಕೋಪಿಯಾದ ಪ್ರತಾಪಸಿಂಹನು ಹೆಚ್ಚಿಗೆ ವಿಚಾರಿಸದೆ ಹಿಂದೆ ಹೇಳಿದಂತೆ ಅಮರಸಿಂಹನನ್ನು ಗಾಯಗೊಳಿಸಿದ್ದನು. ಈ ಮೋಸದ ಪ್ರಾಯಶ್ಚಿತ್ತವ ಭೋಗಿಸುವದಕ್ಕಾಗಿ ಪ್ರತಾಪಸಿಂಹನ ಸೈನಿಕರು ತಮ್ಮ ಒಡೆಯನ ಅಪ್ಪಣೆಯಂತೆ ಠಾಕೂರನ ಶಿರಚ್ಛೇದವನ್ನು ಮಾಡಿದರು. ಈ ಮೇರೆಗೆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವು ಠಾಕೂರನಿಗೆ ದೊರೆತಂತಾಯಿತು.

---

೩ನೆಯ ಪ್ರಕರಣ

## ಸಮರಾಂಗಣದ ಸಿದ್ಧತೆ

ಎರಡು ದಿವಸಗಳಾದವು. ಈ ಅವಧಿಯಲ್ಲಿ ಪ್ರತಾಪಸಿಂಹನು ಯಾರ ಸಂಗಡಲೂ ಮಾತಾಡಲಿಲ್ಲ. ವಿಮಲೆಯು ಬಿಡುಗಡೆ ಹೊಂದಲಿಕ್ಕೆ ಏನು ಮಾಡಬೇಕೆಂಬುವದು ಅವನಿಗೆ ತೋಚಲೊಲ್ಲದು. ಸಮರದಲ್ಲಿ ಮೊಗಲರಿಗೆ ಎದುರಾಗಿ ನಿಂತು ಜಯಹೊಂದುವಷ್ಟು ಅವನ ಸಿದ್ಧತೆಯಾಗಿದ್ದಿಲ್ಲ. ಮೊಗಲರ ಬಳಿಯಲ್ಲಿ ಸುಮಾರು ಒಂದು ಲಕ್ಷ ಸೈನ್ಯವಿತ್ತು. ಅವರ ಸೈನಿಕರು ಯುದ್ಧ ವಿದ್ಯೆಯಲ್ಲಿ ಒಳ್ಳೇ ಕುಶಲರಾಗಿದ್ದರು. ಆದರೆ ಪ್ರತಾಪಸಿಂಹನ ಸೈನ್ಯವು ಮೊಗಲ ಸೈನ್ಯದ ನಾಲ್ಕರಲ್ಲಿ ಒಂದು ಪಾಲು ನಹ ಇದ್ದಿಲ್ಲ. ರಾಜಸ್ಥಾನದೊಳಗಿನ ಅನೇಕ ಸಣ್ಣ ದೊಡ್ಡ ಅರಸರು ತಮ್ಮ ತಮ್ಮ ಸೈನ್ಯಗಳೊಂದಿಗೆ ಅವನ ಸಹಾಯಕ್ಕೆ ಬರತಕ್ಕವರಿದ್ದರು. ಆದರೆ ಈ ಸಹಾಯವು ಬರುವದಕ್ಕೆ ಇನ್ನೂ ಎಂಟು ದಿವಸದ ಅವಧಿ ಇತ್ತು. ಕಾರಣ ಇಷ್ಟರಲ್ಲಿಯೇ ಯುದ್ಧದ ಸಾಹಸಕ್ಕೆ ಬಿದ್ದರೆ ತನ್ನದೇ ನಾಶವಾಗುವ ಸಂಭವವಿತ್ತು. ಆದುದರಿಂದ ಪ್ರತಾಪಸಿಂಹನು ಯೋಚಿಸುತ್ತಿದ್ದನು. ಆದರೆ ವಿಮಲೆಯ ವಿಷಯಕ್ಕೆ ಏನೂ ಸುದ್ದಿ ಬಾರದ್ದರಿಂದ ಅವನ ಮನಸ್ಸಿಗೆ ಸ್ವಸ್ಥವಿದ್ದಿಲ್ಲ. ಈ ಹೊತ್ತೇ ಮುಂಜಾವಿನಲ್ಲಿ

ಅವನು ಒಬ್ಬ ರಾಹುತನನ್ನು ಸೇಲಿಮನ ಕಡೆಗೆ ಕಳುಹಿದ್ದನು. ಬಂದ ರಾವು ತನ ಕೂಡ ವಿಮಲೆಯನ್ನು ಕಳಿಸಿ ನಮ್ಮ ಸ್ವಾಧೀನ ಮಾಡಬೇಕೆಂದು ಅವನು ಸೇಲಿಮನಿಗೆ ತಿಳುಹಿದ್ದನು; ಆದರೆ ಆ ರಾವುತನು ಇನ್ನೂ ವರೆಗೂ ಬರಲಿಲ್ಲ. ಆದುದರಿಂದ ಪ್ರತಾಪನ ಚಿಂತೆಯು ಹೆಚ್ಚಾಯಿತು. ಅಷ್ಟರಲ್ಲಿ ಸೇಲಿಮನ ಕಡೆಗೆ ಹೋದ ರಾವುತನೊಬ್ಬನೇ ತಿರುಗಿ ಬಂದನು. ಸೇಲಿಮನು ಬರೆದ ಪತ್ರವನ್ನು ಓದಿ ಸ್ವಾಭಿಮಾನಿಯಾದ ಪ್ರತಾಪಸಿಂಹನು ಸಿಟ್ಟಿನಿಂದ ಸಂತಪ್ತ ನಾದನು. ಆ ಪತ್ರವು ಯಾವದೆಂದರೆ—

ತಮ್ಮ ಅಭಿಪ್ರಾಯವು ತಿಳಿಯಿತು ವಿಮಲೆಯ ಕೂಡ ತೀವ್ರವೇ ನಾವು ನಿಕಾ ( ಉಡಕಿ ) ಮಾಡಿಕೊಳ್ಳತಕ್ಕವರಿರುವೆವು. ಆದುದರಿಂದ ಆಕೆ ಯನ್ನು ಅತ್ತ ಕಡೆಗೆ ಕಳಹುವದಕ್ಕಿಂತ ಆಕೆಯ ಲಗ್ನಕ್ಕಾಗಿ ತಾವೇ ಇಲ್ಲಿಗೆ ಬಂದರೆ ನೆಟ್ಟಗಾಗುವದು. ರಾಜಾ ಮಾನಸಿಂಗರಾದರೂ ನಿಮಗೆ ಹೀಗೆ ಆಗ್ರಹ ಪೂರ್ವಕವಾಗಿ ಹೇಳಿರುವರು. ತಿಳಿಯುವದು.

ತಮ್ಮ ಸೇಲಿಮ

ಗಾಯದ ಮೇಲೆ ಬರೆ ಕೊಟ್ಟಂತೆ ಪತ್ರದೊಳಗಿನ ಶಬ್ದಗಳು ಪ್ರತಾಪ ಸಿಂಹನ ಮನಸ್ಸಿಗೆ ಹತ್ತಿದವು. ಒಂದಕ್ಕೊಮ್ಮೆ ರಾಜಾ ಮಾನಸಿಂಗನಿಗೆ ಆದ ಅಪಮಾನದ ಸೇಡು ಸಹ ಸೇಲಿಮನು ಈ ಪತ್ರದಲ್ಲಿ ತೀರಿಸಿ ಕೊಂಡಿದ್ದನು.

ಸಾಯಂಕಾಲವಾಯಿತು. ಇಷ್ಟು ಹೊತ್ತಾದರೂ ಪ್ರತಾಪಸಿಂಹನು ಬಾಯಲ್ಲಿ ನೀರು ಹಾಕಿದ್ದಿಲ್ಲ. ಸಿಟ್ಟು, ತಿರಸ್ಕಾರ, ನಾಚಿಕೆ ಮುಂತಾದ ಮನೋವಿಕಾರಗಳಿಂದ ಅವನ ಮನಸ್ಸು ತಳಮಳಿಸಹತ್ತಿತು. ಅಷ್ಟರಲ್ಲಿ ಒಬ್ಬ ರಜಪೂತ ಸರದಾರನು ತೀಕುತ್ತ ಅಲ್ಲಿಗೆ ಬಂದನು. ಅವನು ಪ್ರತಾಪ ಸಿಂಹನಿಗೆ ವಂದಿಸಿ ಒಂದು ಸಣ್ಣ ಪತ್ರವನ್ನು ಅವನ ಕೈಯಲ್ಲಿ ಕೊಟ್ಟನು. ಆದರಲ್ಲಿ ವಿಮಲೆಯು— “ ಮಹಾರಾಣಾಜೀ, ತಾವು ನನ್ನ ಬಿಡುಗಡೆ ಮಾಡ ಲಿಕ್ಕೆ ಯತ್ನಿಸುತ್ತಿರುವಿರೆಂಬದು ನನಗೆ ತಿಳಿಯಿತು. ಆದರೆ ಈ ಕೆಲಸದಲ್ಲಿ ವಿಲಂಬವಾದರೆ ಘಾತವಾಗುವದು. ಯಾಕಂದರೆ ನಾಳೆ ಮುಂಜಾನೆ ಸೇಲಿ

ಮನ ಕೂಡ ಜುಲುಮೆಯಿಂದ ನನ್ನ ನಿಕಾ ಮಾಡಬೇಕೆಂಬ ದುರಾಲೋಚನೆ ಮಾಡಿರುವರು."

ಪತ್ರವನ್ನು ಕೊಟ್ಟ ರಾವುತನು ಪ್ರತಾಪಸಿಂಹನನ್ನು ಕುರಿತು ನುಡಿದ ನೇನಂದರೆ— "ಮಹಾಸ್ವಾಮಿ, ಈಗ ಅಲ್ಲಿ ವಿಮಲಾದೇವಿಯವರಿಗೆ ಯಾರ ಆಶ್ರಯವೂ ಇಲ್ಲ. ಅವರ ಬಿಡುಗಡೆ ಮಾಡಲಿಕ್ಕೆ ಸರದಾರ ಅಮರಸಿಂಹನು ಬರತಕವನಿದ್ದನು; ಈವರೆಗೂ ಅವನ ಸುದ್ದಿಯೇ ಇಲ್ಲವಂತೆ ಕಾರಣ ರಾಣಾಜಿ ಯವರು ದಯಮಾಡಿ ಬೇಗನೆ ಬರಬೇಕೆಂದು ವಿಮಲಾದೇವಿಯವರು ತಮಗೆ ಆಗ್ರಹಪೂರ್ವಕವಾಗಿ ತಿಳಿಸಲಿಕ್ಕೆ ಹೇಳಿರುವರು."

ಪ್ರತಾಪಸಿಂಹನು ಅಮರಸಿಂಹನ ವೃತ್ತಾಂತವನ್ನು ಸ್ವಲ್ಪದರಲ್ಲಿ ಹೇಳಿ ಆ ರಾವುತನನ್ನು ಅತ್ತ ಕಡೆಗೆ ಕಳುಹಿದನು. ಮತ್ತು ತಾನು ಮುಂದೆ ಏನು ಮಾಡಬೇಕೆಂಬ ಬಗ್ಗೆ ವಿಚಾರ ಮಾಡುತ್ತ ಕುಳಿತನು. ಕಡೆಗೆ ಅವನು ಏನೋ ನಿಶ್ಚಯ ಮಾಡಿದಂತೆ ತೋರಿತು.

———

ಳನೆಯ ಪ್ರಕರಣ

# ವಿಮಲೆಯ ಬಿಡುಗಡೆ

ಚುಮುಚುಮು ನಸುಕು ಹರಿಯುತ್ತಿತ್ತು. ಪಕ್ಷಿಗಳು ತಮ್ಮ ಗೂಡಿನಲ್ಲಿಯೇ ಇದ್ದವು. ಗಾಳಿ ಇಲ್ಲದ್ದರಿಂದ ಗಿಡಗಳು ಚಿತ್ರದಲ್ಲಿ ಬರೆದಂತೆ ಸ್ತಬ್ಧವಾಗಿದ್ದವು. ಈ ಶಾಂತ ವೇಳೆಯಲ್ಲಿ ಹಳದೀಘಟ್ಟದಲ್ಲಿ ೨೩ ಸಾವಿರ ರಜಪೂತ ಸೈನಿಕರು ನೆರೆದಿದ್ದರು. ಸಮೀಪದಲ್ಲಿಯೇ ಮೊಗಲರ ಛಾವಣಿಯು ಇತ್ತು. ಸೈನಿಕರ ಗುಂಪು ಅತ್ತ ಕಡೆಗೆ ಹೊರಟಿತು. ಶೂರ ರಜಪೂತರು ವಿಶ್ವಾಸ ಘಾತವನ್ನು ಅರಿತವರಲ್ಲ. ಅವರು ಶತ್ರುಗಳನ್ನು ಎಚ್ಚರಗೊಳಿಸಲಿಕ್ಕೆ ಆವೇಶ ದಿಂದ "ಜಯ ಹರ ಜಯ ಹರ" ಎಂದು ರಣಗರ್ಜನೆಯನ್ನು ಮಾಡಿದರು. ಈ ಗಂಭೀರಧ್ವನಿಗೆ ಗಿರಿಕಂದರಗಳೆಲ್ಲ ಪ್ರತಿಧ್ವನಿಗೈದವು. ಕುದುರೆಗಳ ಖುರ

ಗಳ ಸಪ್ಪಳವು, ವೀರರ ಆವೇಶಯುಕ್ತ ಭಾಷಣವು, ಶಸ್ತ್ರಗಳ ಖಣಖಣಾಟವು ಇವೆಲ್ಲವುಗಳ ಅಪರಿಮಿತ ಸಪ್ಪಳವನ್ನು ಕೇಳಿ, ಬೆಳಗುಮುಂಜಾವಿನ ತಂಗಾಳಿಯಲ್ಲಿ ಸುಖ ನಿದ್ರೆಗೈಯುವ ಮೊಗಲ ಸೈನಿಕರು ಬೆದರಿ ಬೆಂಡಾಗಿ ಗಡಬಡಿಯಿಂದ ಎದ್ದು, ತತ್‌ಕ್ಷಣದಲ್ಲಿ ಯುದ್ಧಕ್ಕೆ ಸನ್ನದ್ಧರಾದರು. ಇಷ್ಟು ಸ್ವಲ್ಪ ಸೈನ್ಯದೊಡನೆ ಯುದ್ಧಕ್ಕೆ ಬಂದ ಪ್ರತಾಪಸಿಂಹನ ಉದ್ದೇಶವು ಸೇಲಿಮನ ಮನಸ್ಸಿಗೆ ಹೊಳೆಯಿತು. ಇನ್ನು ವಿಮಲೆಯ ಮುಕ್ತತೆಗೋಸ್ಕರ ಪ್ರತಾಪನು ಅತಿ ರಭಸದಿಂದ ಕಾದುವನು; ರಜಪೂತರೆಲ್ಲರೂ ಜೀವದ ಹಂಗುದೊರೆದು ಹೋರಾಡುವರು; ಈ ನನ್ನ ಅಸಂಖ್ಯ ಸೈನಿಕರೂ ಕೂಡ ಅವರ ಸಂಗಡ ಕಾದಿ ಜಯ ಹೊಂದಬೇಕಾದರೆ, ಅಸಂಖ್ಯ ಪ್ರಾಣಹಾನಿಯಾಗುವದು, ಎಂಬ ಈ ಸಂಗತಿಗಳು ಸೇಲಿಮನಿಗ ಗೊತ್ತಿದ್ದವು. ಆದರೂ ಅವನು ಪ್ರಾಣಹಾನಿಯ ಪರಿವೆ ಮಾಡಲಿಲ್ಲ. ವಿಷಯಾಸಕ್ತನಾದ ಸೇಲಿಮನಿಗೆ ತಾನಾಗಿಯೇ ನಡೆದು ಬಂದ ವಿಮಲೆಯಂಥ ಸ್ತ್ರೀರತ್ನವನ್ನು ಕಳೆದುಕೊಳ್ಳುವದು, ಜೀವದಸುತ್ತು ಬಂದಿತು. ಕಾರಣ ಅವಳನ್ನು ತನ್ನ ಅಂಬಾರಿಯಲ್ಲಿಯೇ ಕುಳ್ಳಿರಿಸಿ ಕೊಂಡನು. ಮತ್ತು ತನ್ನ ಸುತ್ತಲು ತನ್ನ ಇಡೀ ಸೈನ್ಯದಿಂದ ಒಂದು ಕೋಟೆಯನ್ನೇ ರಚಿಸಿದನು. ರಾಜಾ ಮಾನಸಿಂಹನಾದರೂ ತನ್ನ ಸೈನ್ಯದೊಂದಿಗೆ ಸೇಲಿಮನಿಗೆ ಬೆಂಬಲವಾಗಿ ಸನ್ನದ್ಧನಾಗಿದ್ದನು.

ಕಾಳಗವು ಪ್ರಾರಂಭವಾಯಿತು. ಚಪಲರಾದ ರಜಪೂತರು ಗಟ್ಟಿಗರಾದ ಮೊಗಲರೊಡನೆ ಹುರುಪಿನಿಂದ ಕಾದಹತ್ತಿದರು. ಹೆಣದ ರಾಶಿಗಳು ಬೀಳಹತ್ತಿದವು ರಣಗರ್ಜನೆಯಿಂದ ಇಡೀ ಅರವಲೀ ಪರ್ವತವು ತುಂಬಿ ಹೋಯಿತು. ಪ್ರತಾಪನ ವೇಷದಿಂದ ಸಾಕ್ಷಾತ್ ರಣದೇವತೆಯೇ ಅವತರಿಸಿರುವಳೋ ಏನೋ ಎಂಬಂತೆ ಭಾಸವಾಗುತ್ತಿತ್ತು. ರಜಪೂತರು ಮಿತಿಮೀರಿ ಪರಾಕ್ರಮವನ್ನು ತೋರಿಸಿದರು. ಮೊಗಲರೂ ಅವರಿಗೆ ಸರಿಯಾಗಿಯೇ ಎದುರಾಗಿ ಕಾದುತ್ತಿದ್ದರು. ಪ್ರತಾಪಸಿಂಹನು ವೀರಾವೇಶದಿಂದ ಉನ್ಮತ್ತನಾಗಿದ್ದನು. ಸಾವಿರಾರು ಮೊಗಲರ ಶಿರಗಳನ್ನು ಕಡಿದು ಆಕಾಶದಲ್ಲಿ ಚೆಂಡುಗಳಂತೆ ಈಡಾಡಿದನು. ಹೆಚ್ಚು ಹೆಚ್ಚು ಮುಂದಕ್ಕೆ ಸಾಗಿದಂತೆ ಪ್ರತಾಪಸಿಂಹನ ಆವೇಶವು ಹೆಚ್ಚಾಯಿತು. ಸೇಲಿಮನ ಆನೆಯನ್ನು ಕಂಡಕೂಡಲೆ ಪ್ರತಾಪಸಿಂಹನು ಅತ್ತ ಕಡೆಗೆ ಸಾಗಿದನು. ಪ್ರತಾಪನು ಏರಿ ಹೋಗುವ

ದನ್ನು ನೋಡಿ ಅಸಂಖ್ಯ ಮೊಗಲರು ಅವನ ಮೇಲೆ ಧುಮುಕಿದರು. ಪ್ರತಾಪನು ನಿರುಪಾಯನಾಗಿ ಅಲ್ಲಿಂದಲೇ ಸೇಲಿಮನ ಮೇಲೆ ಕಸುವಿನಿಂದ ಭಾಲೆಯ ಒಂದು ಏಟನ್ನು ಕೊಟ್ಟನು. ಆದರೆ ಸೇಲಿಮನ ಸುದೈವ, ಭಾಲೆಯು ಹೊಡತವು ಸ್ವಲ್ಪದರಲ್ಲಿಯೇ ತಪ್ಪಿ ಅದು ಅಂಬಾರಿಯ ಕಂಬಕ್ಕೆ ತಾಕಿದ್ದರಿಂದ, ಸೇಲಿಮನ ಪ್ರಾಣರಕ್ಷಣವಾಯಿತು.

ಮತ್ತೊಮ್ಮೆ ಸಂಧಿಸಾಧಿಸಿ ಪ್ರತಾಪನು ಆವೇಶದಿಂದ ಸೇಲಿಮನ ಸಮೀಪಕ್ಕೆ ಏರಿ ಹೋದನು. ಮೊಗಲರೆಲ್ಲರು ಗಾಬರಿಯಾದರು. ಅಂಬಾರಿಯಲ್ಲಿ ಒಬ್ಬ ತುರ್ಕಜಾತಿಯ ದಾಸಿಯೊಡನೆ ಕುಳಿತಿರುವ ಅತೀ ದೀನಳಾದ ವಿಮಲೆಯನ್ನು ಕಂಡು ಪ್ರತಾಪನ ಕ್ರೋಧಾಗ್ನಿಯು ಹೊತ್ತಿತು. ಕಣ್ಣೊಳಗಿಂದ ಕಿಡಿಗಳು ಹಾರಹತ್ತಿದವು. ಅವನು ತನ್ನ "ಚೈತಕ"ವೆಂಬ ಕುದುರೆಗೆ ಮಮ್ರೋಜುಗಳಿಂದ ಚುಚ್ಚಿದನು. ಕ್ಷಣಾರ್ಧದಲ್ಲಿ ಆ ಅಶ್ವರತ್ನವು ಆನೆಯ ಗಂಡಸ್ಥಳಕ್ಕೆ ಹಾರಿತು. ಪ್ರತಾಪನ ಖಡ್ಗದ ಒಂದೇ ಹೊಡತದಿಂದ ಮಾವುತನು ನೆಲಕ್ಕುರುಳಿದನು. ಸೇಲಿಮನು ಗಾಬರಿಯಾಗಿ ತುಸು ಹಿಂದಕ್ಕೆ ಸರಿದನು. ಕೂಡಲೆ ಪ್ರತಾಪನು ಆ ತುರ್ಕಸ್ತ್ರೀಯ ಹತ್ತರಿದ್ದ ವಿಮಲೆಯನ್ನು ಕೈ ಹಿಡಿದೆಳೆದು ತನ್ನ ಕುದುರೆಯ ಮೇಲೆ ಕೂಡ್ರಿಸಿಕೊಂಡನು. ಕ್ಷಣಮಾತ್ರದಲ್ಲಿ ಚೈತಕವು ರಭಸದಿಂದ ಹಿಂದಿರುಗಿ ವೇಗದಿಂದ ಓಡಹತ್ತಿತು. ರಾಣಾನು ತನ್ನ ಸೈನ್ಯಕ್ಕೆ ತಿರುಗಿ ಬಂದ ಕೂಡಲೆ ರಜಪೂತರು ಆನಂದದಿಂದ ರಣಗರ್ಜನೆಯನ್ನು ಮಾಡಿದರು; ಆದರೆ ಹಿಂದಿರುಗಿ ಬರುವಾಗ ವಿಮಲೆಗೆ ಒಂದು ಬಾಣ ತಗಲಿ ಅವಳ ಸರ್ವಾಂಗವು ರಕ್ತಮಯವಾಗಿತ್ತು. ಪ್ರತಾಪನ ಪ್ರೀತಿಯ ಕುದುರೆಯಾದ ಚೈತಕನಿಗೂ ಗಾಯವಾಗಿತ್ತು. ಆದರೂ ಆ ಕೃತಜ್ಞ ಪ್ರಾಣಿಯು ಅದರ ಅರವು ಇಲ್ಲದೆ ಇಲ್ಲಿಯ ವರೆಗೆ ನಾಗಿ ಬಂದಿತು.

---

೫ನೆಯ ಪ್ರಕರಣ

# ಉಪಸಂಹಾರ

ದಿನಮಣಿಯು ಅಸ್ತಂಗತನಾದನು. ರಜಪೂತರ ಹಾನಿಯಾದದ್ದನ್ನು ಕಂಡು ಸೃಷ್ಟಿಸುಂದರಿಯ ಮುಖವು ಕಪ್ಪಾಯಿತೋ ಏನೋ ಅನ್ನುವಂತೆ ವೃಕ್ಷಗಳೂ ವನಚರ ಪ್ರಾಣಿಗಳೂ ಪರ್ವತ ಶಿಖರಗಳೂ ಕಗ್ಗತ್ತಲೆಯಲ್ಲಿ ಮುಸುಕಿ ಹೋದವು ಈ ಅಂಧಃಕಾರದಲ್ಲಿ ಹೆಣಗಳ ರಾಶಿಗಳು ಕೂಡ ಕಾಣದ ಹಾಗಾದವು. ಗಾಯಹೊಂದಿ ಅಸನ್ನ ಮರಣರಾದ ದಂಡಾಳುಗಳ ಆರ್ತ ಸ್ವರವು ನಡುನಡುವೆ ಕೇಳಬರುತ್ತಿತ್ತು. ಇಂಥ ಸಮಯದಲ್ಲಿ ಒಬ್ಬ ರಜಪೂತ ವೀರ ಪುರುಷನು ಗಾಯಹೊಂದಿದ ಕುದುರೆಯ ಮೇಲೆ ಒಬ್ಬ ಬಾಲಿಕೆಯನ್ನು ಕುಳ್ಳಿರಿಸಿಕೊಂಡು ಒತ್ತರದಿಂದ ಸಾಗುತ್ತಲಿದ್ದನು. ವಾಚಕರೆ, ಈ ಶೂರಪುರುಷನು ಯಾರೆಂಬುದನ್ನು ನಿಮಗೆ ಹೇಳಬೇಕಾಗಿಲ್ಲ. ಅಪಜಯ ಹೊಂದಿದರೂ, ವಿಮಲೆಯನ್ನು ಸೆರೆ ಬಿಡಿಸಿ ತಂದ ಪ್ರತಾಪಸಿಂಹನು ಇವನೇ ಅಲ್ಲವೇ ?

ಗಾಯಹೊಂದಿದ ಆ ಪ್ರಾಮಾಣಿಕ ಅಶ್ವರತ್ನವು ನಡುದಾರಿಯಲ್ಲಿಯೇ ಪ್ರತಾಪಸಿಂಹನ ಕೈಬಿಟ್ಟಿತು. ಆಗ ಒಬ್ಬ ರಜಪೂತ ಸರದಾರನು ಮತ್ತೊಂದು ಕುದುರೆಯನ್ನು ಪ್ರತಾಪನಿಗೆ ತಂದು ಕೊಟ್ಟನು. ರಜಪೂತ ಜನರು ಪೂರ್ಣ ಪರಾಜಯ ಹೊಂದಿದ್ದರಿಂದ ಅವರ ಸೈನ್ಯವೆಲ್ಲ ಸತ್ತು ಕೆಟ್ಟು ದಿಕ್ಕಾಪಾಲಾಗಿ ಹೋಗಿತ್ತು. ಮೊಗಲರ ಸೈನ್ಯಕ್ಕಾದರೂ ಈ ಭಯಂಕರ ಕಾಳಗದಲ್ಲಿ ಬಹಳೇ ಹಾನಿಯಾಗಿತ್ತು. ಜಯಹೊಂದಿದ್ದರೂ ಸೇಲಿಮನಿಗೆ ತನ್ನ ಕೈಗೆ ಸಿಕ್ಕ ಬೇಟೆಯು ಪಾರಾಗಿ ಹೋಯಿತೆಂಬ ವ್ಯಸನವಾಗಿತ್ತು.

ಇತ್ತ ಕಡೆಗೆ ಗವಿಯಲ್ಲಿ ಹೊರಸಿನ ಮೇಲೆ ಅಮರಸಿಂಹನು ಚಿಂತಾತುರನಾಗಿ ಬಿದ್ದಿದ್ದನು. ಹತ್ತಿರವೇ ಪದ್ಮಾವತಿಯು ವಿಮಲೆಯ ಬಗ್ಗೆ ಆಲೋಚಿಸುತ್ತ ನಿಂತಿದ್ದಳು. ಇಷ್ಟು ಕತ್ತಲಾದರೂ ಪ್ರತಾಪಸಿಂಹನ ಕಡೆಯ ಸುದ್ದಿಯೇ ಬಂದಿದ್ದಿಲ್ಲ. ಯಾವನಾದರೂ ಸೇವಕನು ಬಂದು ವಿಮಲೆಯು ಬಿಡುಗಡೆ ಹೊಂದಿದ ಸುದ್ದಿಯನ್ನು ಹೇಳುವನೋ ಏನೋ ಎಂಬ ಲವಲವಿಕೆಯಿಂದ,

ಸ್ವಲ್ಪ ಸಪ್ಪಳವಾದ ಕೂಡಲೆ ಪದ್ಮಾವತಿಯು ಉತ್ಸಾಹಭರಿತಳಾಗಿ ಗವಿಯ ಹೊರಗೆ ಬಂದು ನೋಡುವಳು. ಏನೂ ಕಾಣದೆ ಪುನಃ ನಿಟ್ಟುಸಿರು ಬಿಟ್ಟು ಒಳಗೆ ಹೋಗುವಳು. ನಡುನಡುವೆ ಅಮರಸಿಂಹನು ಎದ್ದು ಕುಳಿತು "ಯಾರಾದರೂ ಬಂದರೇನು?" ಎಂದು ಕೇಳುವನು. ಇಷ್ಟರಲ್ಲಿ ಶೂರ ಪ್ರತಾಪಸಿಂಹನು ಗಾಯಪಟ್ಟ ವಿಮಲೆಯನ್ನು ಕೈಹಿಡಿದುಕೊಂಡು ಗವಿಯಲ್ಲಿ ಪ್ರವೇಶಿಸಿದನು. ಅವಳನ್ನು ಕಂಡಕೂಡಲೆ ಪದ್ಮಾವತಿಯು ಪರಮ ಸಂತೋಷದಿಂದ ಓಡುತ್ತ ಬಂದು ಅವಳನ್ನು ಬಿಗಿಯಾಗಿ ಅಪ್ಪಿಕೊಂಡಳು ಅಮರಸಿಂಹನು ಆನಂದ ಪರವಶನಾಗಿ ಚಟ್ಟನೆ ಹೊರಸಿನ ಮೇಲಿಂದ ಇಳಿದು ಬಂದನು. ಕೂಡಲೆ ಅವನ ಶಾರೀರಿಕ ಮಾನಸಿಕ ವೇದನೆಗಳು ಇಲ್ಲದಂತಾದವು. ಅವನು ತಡ ಮಾಡದೆ ವಿಮಲೆಯ ಗಾಯವನ್ನು ಕಟ್ಟಿದನು. ವಿಮಲೆಗೆ ತುಸ ಜಂಪು ಹತ್ತಿತು.

ಪ್ರತಾಪಸಿಂಹನು ಗವಿಯ ಹೊರಗೆ ಬಂದು, ಉಶ್ಶೆಂದು ಒಂದು ಹಾಸುಗಲ್ಲಿನ ಮೇಲೆ ಕುಳಿತನು. ಆಗ ಅಮರಸಿಂಹನು— "ರಾಣಾಜಿಯವರೇ, ಇಂದಿಗೆ ನೀವೇ ಧನ್ಯರು. ಅಸಂಖ್ಯ ರಜಪೂತರ ಪ್ರಾಣಹಾನಿಯಾಗಿ ಅಪಜಯ ಹೊಂದಿದರೂ, ನಿಮ್ಮ ನಿಶ್ಚಯವನ್ನು ಕಡೆಗಾಣಿಸಿದಿರಿ. ನಿಶ್ಚಯದ ಬಲಕ್ಕೆ ತಕ್ಕ ಪ್ರತಿಫಲವು ದೊರೆತಿತು. ನಾನು ನಿಮ್ಮನ್ನು ಜರೆದು ನುಡಿದದ್ದಕ್ಕೆ ಕ್ಷಮಿಸಿರಿ. ಯಾವ ಖಡ್ಗವು ವಿಮಲೆಯ ಬಿಡುಗಡೆಗೆ ಅಡ್ಡಿಯಾಗಿತ್ತೋ ಅದೇ ಖಡ್ಗವು ಈ ಹೊತ್ತು ವಿಮಲೆಯನ್ನು ಮುಕ್ತ ಮಾಡಿರುವದು," ಎಂದು ನುಡಿಯುತ್ತಿರುವಷ್ಟರಲ್ಲಿ ಪದ್ಮಾವತಿಯು ಪ್ರತಾಪಸಿಂಹನ ಕಾಲ್ಗೆರಗಿ— "ರಾಣಾಜಿಯವರೆ, ತಮ್ಮ ಘೋರ ಪ್ರತಿಜ್ಞೆಯನ್ನು ಪೂರ್ಣ ಮಾಡಿ ನನ್ನ ಪ್ರಿಯ ಸಖಿಯಾದ ವಿಮಲೆಯನ್ನಂತೂ ಆ ನೀಚನಾದ ಸೇಲಿಮನ ಕೈಯೊಳಗಿಂದ ಮುಕ್ತ ಮಾಡಿದಿರಿ. ಇನ್ನು ಅವಳನ್ನು ಸುರಕ್ಷಿತವಾಗಿ ಕಾಂಚಪುರಕ್ಕೆ ಮುಟ್ಟಿಸಿ ಅವಳ ರಾಜ್ಯದ ವ್ಯವಸ್ಥೆಯನ್ನು ಚನ್ನಾಗಿ ಸಾಗುವಂತೆ ಮಾಡಿ, ಅವಳನ್ನು ಯೋಗ್ಯ ವರನಿಗೆ ಲಗ್ನಮಾಡಿ ಕೊಡುವದೂ ತಮ್ಮನ್ನೇ ಕೂಡಿದೆ. ಈ ಹೊತ್ತು ತಾವು ಅವಳಿಗೆ ಪುನರ್ಜನ್ಮ ಕೊಟ್ಟದ್ದರಿಂದ ತಾವೇ ಆಕೆಯ ಪಿತೃಸ್ಥಾನದಲ್ಲಿದ್ದಂತಾಯಿತು. ನನಗೆ ಅಭಯವಚನವನ್ನಿತ್ತರೆ ನಾನು ಏಳುವೆನು" ಎಂದು ನುಡಿದಳು.

ಆದಕ್ಕೆ ಪ್ರತಾಪನು— “ಅಮರಸಿಂಹಾ, ಪದ್ಮಾವತೀ, ನಾನು ನನ್ನ ಕರ್ತವ್ಯಕ್ಕಿಂತ ಹೆಚ್ಚಿನದೇನೂ ಮಾಡಿಲ್ಲ. ನನ್ನ ಪಾಪದ ಕ್ಷಾಲನೆಯನ್ನು ನಾನೇ ಮಾಡಿಕೊಳ್ಳುವದು ನನ್ನ ಕರ್ತವ್ಯವಲ್ಲವೆ? ಸುಶೀಲರಾದ ರಜಪೂತ ಸ್ತ್ರೀಯರನ್ನು ಮೊಗಲರ ಕಾಟದಿಂದ ಬಿಡಿಸುವದು ಪ್ರತಿಯೊಬ್ಬ ನಿಜವಾದ ರಜಪೂತನ ಕರ್ತವ್ಯವಿರುವದು. ನನ್ನ ಅಸಂಖ್ಯ ಶೂರ ಸೈನಿಕರು ರಣಭೂಮಿಯಲ್ಲಿ ಹೋರಾಡಿ ಧಾರಾತೀರ್ಥದಲ್ಲಿ ದೇಹವಿಟ್ಟರೂ, ನನಗೆ ಪೂರ್ಣ ಪರಾಜಯವಾದರೂ, ಭಗವಾನ್ ಏಕಲಿಂಗಜಿಯ ಕೃಪೆಯಿಂದ ಒಬ್ಬ ರಜಪೂತ ಕನ್ನಿಕೆಯ ಮರ್ಯಾದಾ ರಕ್ಷಣವಾಯಿತು. ಮುಂದಾದರೂ, ಭಗವಾನ್ ಏಕಲಿಂಗಜಿಯು ಆಕೆಯ ಉತ್ಕರ್ಷವನ್ನು ಎಲ್ಲ ತರದಿಂದ ಮಾಡಲು ಸಮರ್ಥನಿರುವನು.” ಎಂದು ನುಡಿದನು. ಭಾಪುರೆ! ವೀರರತ್ನಾ!! ಪ್ರತಾಪಾ! ನೀನೇ ಧನ್ಯನು!!! ನಿನ್ನ ಸ್ವಾಭಿಮಾನ ಸಂಭ್ರಮವು ಪರಮ ಧನ್ಯವಾದದ್ದು!

— ಸಮಾಪ್ತ —